# ಭಾಗ–1
# ರಂಗಸಮಾಜದ ಅಂಗ ರಚನೆ

| ಅಂಗ ರಚನೆಯ ವಿವರ (ಪ್ರಸ್ತುತ) | ತಿದ್ದುಪಡಿ ಆಗಬೇಕಾದ ವಿವರ (ಪರಿಷ್ಕೃತ) | ಷರಾ |
|---|---|---|
| **ನಿಬಂಧನೆಗಳು:**<br>(ಕರ್ನಾಟಕ ರಾಜ್ಯದ ಸೊಸೈಟಿ ನೋಂದಣಿ ಕಾಯ್ದೆ ಕಾನೂನುಗಳಿಗೆ 1960 ಒಳಪಟ್ಟಿದೆ)<br>**ಹೆಸರು:** ಈ ನಿಬಂಧನೆಗಳನ್ನು 'ಕರ್ನಾಟಕ ರಂಗಸಮಾಜದ ನಿಬಂಧನೆಗಳು' ಎಂದು ಹೆಸರಿಸಲಾಗಿದೆ. | ಈಗಿರುವಂತೆ | |
| **ವ್ಯಾಖ್ಯೆ:**<br>ರಂಗಸಮಾಜ ಎಂದರೆ ಕರ್ನಾಟಕ ರಂಗಸಮಾಜ ಎಂದು ತಿಳಿಯುವುದು.<br>**ಅಧ್ಯಕ್ಷರು:** ಅಂದರೆ ಕರ್ನಾಟಕ ರಂಗಸಮಾಜದ ಅಧ್ಯಕ್ಷರು<br>**ಸದಸ್ಯ ಕಾರ್ಯದರ್ಶಿಗಳು:** ಅಂದರೆ ಕರ್ನಾಟಕ ರಂಗಸಮಾಜದ ಸದಸ್ಯ ಕಾರ್ಯದರ್ಶಿಗಳು<br>**ನಿರ್ದೇಶಕರು:** ಅಂದರೆ ರಂಗಸಮಾಜವು ನಿರ್ವಹಿಸುತ್ತಿರುವ ರಂಗಾಯಣಕ್ಕೆ/ಗಳಿಗೆ ಪೂರ್ಣಾವಧಿಗೆ ನೇಮಕಗೊಂಡ ನಿರ್ದೇಶಕರು.<br>**'ರಂಗಾಯಣ':** ಅಂದರೆ ಕರ್ನಾಟಕ ರಂಗಸಮಾಜವು ಮುಖ್ಯವಾಗಿ ನಿರ್ವಹಿಸುತ್ತಿರುವ ನಾಟಕ ರೆಪರ್ಟರಿ ಸಂಸ್ಥೆಗಳು ಎಂದು ತಿಳಿಯುವುದು. | **ವ್ಯಾಖ್ಯೆ:**<br>ರಂಗಸಮಾಜ ಎಂದರೆ ಕರ್ನಾಟಕ ರಂಗಸಮಾಜ ಎಂದು ತಿಳಿಯುವುದು.<br>**ಅಧ್ಯಕ್ಷರು:** ಅಂದರೆ ಕರ್ನಾಟಕ ರಂಗಸಮಾಜದ ಅಧ್ಯಕ್ಷರು<br>**ಉಪಾಧ್ಯಕ್ಷರು:** ಅಂದರೆ ಕರ್ನಾಟಕ ಸರ್ಕಾರವು ನಾಮ ನಿರ್ದೇಶನ ಮಾಡುವ ರಂಗಸಮಾಜದ ಉಪಾಧ್ಯಕ್ಷರು.<br>**ಸದಸ್ಯ ಕಾರ್ಯದರ್ಶಿಗಳು:** ಅಂದರೆ ಕರ್ನಾಟಕ ಸರ್ಕಾರ ಸೂಚಿಸುವ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ 'ಎ' ಗುಂಪಿನ ಅಧಿಕಾರಿ.<br>**ನಿರ್ದೇಶಕರು:** ಅಂದರೆ ಕರ್ನಾಟಕ ಸರ್ಕಾರವು ರಾಜ್ಯದಲ್ಲಿ ಸ್ಥಾಪಿಸಿರುವ ರಂಗಾಯಣಗಳಿಗೆ ರಂಗಸಮಾಜದ ಮೂಲಕ ಆಯ್ಕೆಯಾಗಿ ನಾಮ ನಿರ್ದೇಶನ ಗೊಳ್ಳುವ (ಪೂರ್ಣ ಅವಧಿಗೆ ನೇಮಕಗೊಳ್ಳುವ) ನಿರ್ದೇಶಕರು<br>**'ರಂಗಾಯಣ':** ಅಂದರೆ ಕರ್ನಾಟಕ ಸರ್ಕಾರದಿಂದ ಸ್ಥಾಪಿತವಾದ ಕರ್ನಾಟಕ ರಂಗಸಮಾಜವು ನಿರ್ವಹಿಸುತ್ತಿರುವ ನಾಟಕ ರೆಪರ್ಟರಿ ಸಂಸ್ಥೆಗಳು ಎಂದು ತಿಳಿಯುವುದು. | |
| **ರಂಗಸಮಾಜದ ಪ್ರಾಧಿಕಾರಗಳು:**<br>**ಸಾರ್ವತ್ರಿಕ ಮಂಡಳಿ:**<br>**ನಿರ್ವಾಹಕ ಮಂಡಳಿ**<br>**ರಂಗಸಮಾಜವು ಕಾಲಕಾಲಕ್ಕೆ ರಚಿಸುವ ಸಮಿತಿಗಳು, ಉಪ ಸಮಿತಿಗಳು** | **ರಂಗಸಮಾಜದ ಪ್ರಾಧಿಕಾರಗಳು:**<br>**ಪದನಿಮಿತ್ತ ಸದಸ್ಯರು :** ರಂಗಸಮಾಜದಲ್ಲಿ ಈ ಕೆಳಗೆ ಸೂಚಿಸಿದವರು ಪದನಿಮಿತ್ತ ಸದಸ್ಯರು<br>(1) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರು ರಂಗಸಮಾಜದ ಅಧ್ಯಕ್ಷರಾಗಿರುತ್ತಾರೆ.<br>(2) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು<br>(3) ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯ ಾರ್ಯದರ್ಶಿಗಳು/ಅವರ ಪ್ರತಿನಿಧಿ<br>(4) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು<br>(5) ನಾಟಕ ಕರ್ನಾಟಕ ರಂಗಾಯಣಗಳ ನಿರ್ದೇಶಕರು<br>(6) ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರು<br>(7) ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಎ ಗುಂಪಿನ ಅಧಿಕಾರಿಗಳು | |

| | | |
|---|---|---|
| | ಸದಸ್ಯ ಕಾರ್ಯದರ್ಶಿಗಳು | |
| **ರಂಗಸಮಾಜದ ಸದಸ್ಯತ್ವ**<br>**ಪದನಿಮಿತ್ತ ಸದಸ್ಯರು**<br>ರಂಗಸಮಾಜದಲ್ಲಿ ಈ ಕೆಳಗೆ ಸೂಚಿಸಿದ ಒಟ್ಟು ಏಳು ಜನ ಪದನಿಮಿತ್ತ ಸದಸ್ಯರು ಇರುತ್ತಾರೆ.<br>1. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮಾನ್ಯ ಸಚಿವರು ರಂಗಸಮಾಜದ ಅಧ್ಯಕ್ಷರು<br>2. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ರಂಗಸಮಾಜದ ಸದಸ್ಯ ಕಾರ್ಯದರ್ಶಿಗಳು<br>3. ರಾಜ್ಯ ಸರ್ಕಾರದ ಆರ್ಥಿಕ ಇಲಾಖೆಯ ಕಮಿಷನರ್ ಕಾರ್ಯದರ್ಶಿಗಳು ಅಥವಾ ಅವರ ಪ್ರತಿನಿಧಿಗಳು.<br>4. ನಾಟಕ ಕರ್ನಾಟಕ ರಂಗಾಯಣದ/ಗಳ ನಿರ್ದೇಶಕರು<br>5. ಕರ್ನಾಟಕ ನಾಟಕ ಅಕಾಡೆಮಿಯ ಅಧ್ಯಕ್ಷರು.<br>6. ನೀನಾಸಮ್ ರಂಗಶಿಕ್ಷಣ ಕೇಂದ್ರದ ಮುಖ್ಯಸ್ಥರು. | | |
| **ನಾಮನಿರ್ದೇಶಿತ ಸದಸ್ಯರು:**<br>ರಾಜ್ಯ ಸರ್ಕಾರವು ರಂಗಸಮಾಜಕ್ಕೆ ಹೊರ ರಾಜ್ಯದ ತಜ್ಞರನ್ನೂ ಸೇರಿದಂತೆ ಅಭಿನಯ, ನಿರ್ದೇಶನ, ನೇಪಥ್ಯ ನಾಟಕ ರಚನೆ, ವಿಮರ್ಶೆ, ಚಿತ್ರಕಲೆ, ಪತ್ರಿಕೋದ್ಯಮ ಹೀಗೆ ರಂಗಭೂಮಿಗೆ ಸಂಬಂ ಧಿಸಿದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 7 ಜನ ಹಿರಿಯ ತಜ್ಞರನ್ನು ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡುತ್ತದೆ. | **ನಾಮನಿರ್ದೇಶಿತ ಸದಸ್ಯರು:**<br>ರಾಜ್ಯ ಸರ್ಕಾರವು ರಂಗಸಮಾಜಕ್ಕೆ ಹೊರ ರಾಜ್ಯದ ರಂಗತಜ್ಞರನ್ನೊಳಗೊಂಡಂತೆ ಅಭಿನಯ, ನಿರ್ದೇಶನ, ನೇಪಥ್ಯ (ಸಂಗೀತ, ಪ್ರಸಾದನ, ವಸ್ತ್ರ ವಿನ್ಯಾಸ, ರಂಗ ವಿನ್ಯಾಸ, ಬೆಳಕು ವಿನ್ಯಾಸ) ನಾಟಕ ರಚನೆ, ವಿಮರ್ಶೆ, ಚಿತ್ರಕಲೆ, ಪತ್ರಿಕೋದ್ಯಮ ಹೀಗೆ ರಂಗಭೂಮಿಗೆ ಸಂಬಂಧಿಸಿದ ವಿವಿಧ ಕ್ಷೇತ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 7 ಜನ ಹಿರಿಯ ತಜ್ಞರನ್ನು ಸದಸ್ಯರನ್ನಾಗಿ ನಾಮ ನಿರ್ದೇಶನ ಮಾಡುತ್ತದೆ. | |
| **ಕೋಆಪ್ಟ್ (ಆಯ್ಕೆ) ಮಾಡುವ ಸದಸ್ಯರು:**<br>ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನ ಮಾಡಿದ ಸದಸ್ಯರು ಮತ್ತು ಪದನಿಮಿತ್ತ ಸದಸ್ಯರು ಸೇರಿ ತಮ್ಮ ಪ್ರಥಮ ಸಭೆಯಲ್ಲಿ ಒಬ್ಬರು ತಜ್ಞರನ್ನು ರಂಗಸಮಾಜದ ಸದಸ್ಯರನ್ನಾಗಿ ಕೋ–ಆಪ್ಟ್ (ಆಯ್ಕೆ) ಮಾಡುತ್ತಾರೆ. ಹೀಗೆ ಕೋ–ಆಪ್ಟ್ ಮಾಡಲ್ಪಡುವ ಸದಸ್ಯರು ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನವಾಗುವ ಸದಸ್ಯರಿಗಿರುವ ಎಲ್ಲ ಅರ್ಹತೆ, ಯೋಗ್ಯತೆ ಹೊಂದಿರಬೇಕು. | **ಕೋಆಪ್ಟ್ (ಸಹ ಆಯ್ಕೆ) ಮಾಡುವ ಸದಸ್ಯರು:**<br>ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನಗೊಂಡ ಸದಸ್ಯರು ಮತ್ತು ಪದನಿಮಿತ್ತ ಸದಸ್ಯರು ಸೇರಿ ರಂಗಸಮಾಜದ ಪ್ರಥಮ ಸಾರ್ವತ್ರಿಕ ಮಂಡಳಿ ಸಭೆಯಲ್ಲಿ ಒಬ್ಬರು ರಂಗತಜ್ಞರನ್ನು (ಸರ್ಕಾರ ನಾಮ ನಿರ್ದೇಶನ ಮಾಡಿದ ಸದಸ್ಯರಲ್ಲಿ ರಂಗಭೂಮಿಯ ಯಾವ ವಿಭಾಗಕ್ಕೆ ಪ್ರಾತಿನಿಧ್ಯ ಸಿಕ್ಕಲ್ಲವೋ ಅಂತಹ ವಿಭಾಗದಿಂದ) ರಂಗಸಮಾಜದ ಸಹ ಸದಸ್ಯರನ್ನಾಗಿ (ಕೋ–ಆಪ್ಟ್) ಮಾಡಿಕೊಳ್ಳುವುದು. ಹೀಗೆ ಕೋ–ಆಪ್ಟ್ ಮಾಡಲ್ಪಡುವ ಸದಸ್ಯರು ರಾಜ್ಯ ಸರ್ಕಾರದಿಂದ ನಾಮ ನಿರ್ದೇಶನವಾಗುವ ಸದಸ್ಯರಿಗಿರುವ ಎಲ್ಲ ಅರ್ಹತೆ, ಅಧಿಕಾರ ಹೊಂದಿರುತ್ತಾರೆ. | |

| | | |
|---|---|---|
| **ಸದಸ್ಯತ್ವದ ಅವಧಿ:** ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಉಳಿದೆಲ್ಲ ಸದಸ್ಯರ ಸದಸ್ಯತ್ವದ ಕಾಲಾವಧಿ ನಾಲ್ಕು ವರ್ಷಗಳು ಮಾತ್ರ. ಆದರೆ ಸರ್ಕಾರವು ಹೊಸ ಸದಸ್ಯರನ್ನು ನಾಮ ನಿರ್ದೇಶನ ಮಾಡುವ ತನಕ ಈ ಸದಸ್ಯರು ಕನಿಷ್ಟ ಒಂದು ವರ್ಷ ತಮ್ಮ ಅವಧಿಯನ್ನು ವಿಸ್ತರಿಸಲು ಅವಕಾಶವಿದೆ. | **ಸದಸ್ಯತ್ವದ ಅವಧಿ:** ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ, ಉಳಿದೆಲ್ಲ ಸದಸ್ಯರ ಸದಸ್ಯತ್ವದ ಕಾಲಾವಧಿ ನಾಲ್ಕು ವರ್ಷಗಳು ಮಾತ್ರ. ಆದರೆ ಸರ್ಕಾರವು ಹೊಸ ರಂಗಸಮಾಜವನ್ನು ರಚಿಸುವ ತನಕ ಚಾಲ್ತಿಯಲ್ಲಿರುವ ರಂಗಸಮಾಜವು (ಗರಿಷ್ಟ 1 ವರ್ಷದವರೆಗೆ) ತಂತಾನೆ ಮುಂದುವರೆಯುತ್ತದೆ. | |
| ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಉಳಿದೆಲ್ಲ ಸದಸ್ಯರಲ್ಲಿ ಯಾವ ಕಾರಣಕ್ಕಾದರೂ (ಸದಸ್ಯತ್ವಕ್ಕೆ ರಾಜೀನಾಮೆ, ಅನಾರೋಗ್ಯ, ಮರಣ, ಅಪರಾಧ, ಇತ್ಯಾದಿಗಳು) ಸದಸ್ಯ ಸ್ಥಾನಗಳು ಖಾಲಿಯಾದಲ್ಲಿ ಅವರ ಸದಸ್ಯತ್ವದ ಉಳಿದ ಅವಧಿಗೆ ಹೊಸ ಸದಸ್ಯರನ್ನು ರಂಗಸಮಾಜವೇ ಆಯ್ಕೆ ಮಾಡಲು ಅವಕಾಶವಿದೆ. | ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಉಳಿದೆಲ್ಲ ಸದಸ್ಯರಲ್ಲಿ ಯಾವ ಕಾರಣಕ್ಕಾದರೂ (ಸದಸ್ಯತ್ವಕ್ಕೆ ರಾಜೀನಾಮೆ, ಅನಾರೋಗ್ಯ, ಮರಣ, ಅಪರಾಧ, ಇತ್ಯಾದಿಗಳು) ಸದಸ್ಯ ಸ್ಥಾನಗಳು ಖಾಲಿಯಾದಲ್ಲಿ, ಅವರ ಸದಸ್ಯತ್ವದ ಉಳಿದ ಅವಧಿಗೆ (ಉಳಿದ ಅವಧಿ ಕನಿಷ್ಠ ಒಂದು ವರ್ಷ ಅಥವಾ ಹೆಚ್ಚಾಗಿದ್ದಲ್ಲಿ) ಹೊಸ ಸದಸ್ಯರನ್ನು ರಂಗಸಮಾಜವೇ ಆಯ್ಕೆ ಮಾಡಿಕೊಳ್ಳುವುದು. | |
| ಪದನಿಮಿತ್ತ ಸದಸ್ಯರು ತಮ್ಮ ನಿರ್ಧಿಷ್ಟ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವತ್ತಿರುವ ಅವಧಿಗೆ ಮಾತ್ರ ರಂಗಸಮಾಜದ ಸದಸ್ಯತ್ವ ಅನ್ವಯಿಸುತ್ತದೆ. | ಪದನಿಮಿತ್ತ ಸದಸ್ಯರು ತಮ್ಮ ನಿರ್ಧಿಷ್ಟ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುವತ್ತಿರುವ ಅವಧಿಗೆ ಮಾತ್ರ ರಂಗಸಮಾಜದ ಸದಸ್ಯತ್ವ ಅನ್ವಯಿಸುತ್ತದೆ. | |
| ಯಾವುದೇ ಸಂದರ್ಭಗಳಲ್ಲಿ ಯಾವುದೇ ಸದಸ್ಯರ ಸ್ಥಾನಗಳು ಖಾಲಿಯಾಗಿ ಉಳಿದಿವೆ ಎಂಬ ಕಾರಣದಿಂದಾಗಲಿ ಅಥವಾ ಸದಸ್ಯರ ನಾಮ ನಿರ್ದೇಶನ ಸಮರ್ಪಕವಾಗಿಲ್ಲ ಎಂಬ ಕಾರಣದಿಂದಾಗಲೀ ರಂಗಸಮಾಜದ ಸಾರ್ವತ್ರಿಕ ಮತ್ತು ನಿರ್ವಾಹಕ ಮಂಡಳಿಗಳು ತತ್ಸಂಬಂಧ ಸಮಿತಿ ಉಪಸಮಿತಿಗಳು ಅಂಥ ಸಂದರ್ಭಗಳಲ್ಲಿ ನಡೆಸುವ ಕಾರ್ಯಗಳು, ತೆಗೆದುಕೊಂಡ ನಿರ್ಣಯಗಳು ಸಕ್ರಮವೆಂದೇ ತಿಳಿಯಬೇಕು. | ಯಾವುದೇ ಸಂದರ್ಭಗಳಲ್ಲಿ ಯಾವುದೇ ಸದಸ್ಯರ ಸ್ಥಾನಗಳು ಖಾಲಿಯಾಗಿ ಉಳಿದಿವೆ ಎಂಬ ಕಾರಣದಿಂದಾಗಲಿ ಅಥವಾ ಸದಸ್ಯರ ನಾಮ ನಿರ್ದೇಶನ ಸಮರ್ಪಕವಾಗಿಲ್ಲ ಎಂಬ ಕಾರಣದಿಂದಾಗಲೀ ರಂಗಸಮಾಜದ ಸಾರ್ವತ್ರಿಕ ಮತ್ತು ಕಾರ್ಯನಿರ್ವಾಹಕ ಮಂಡಳಿಗಳು ತತ್ಸಂಬಂಧ ಸಮಿತಿ ಉಪಸಮಿತಿಗಳು ಅಂಥ ಸಂದರ್ಭಗಳಲ್ಲಿ ನಡೆಸುವ ಕಾರ್ಯಗಳು, ತೆಗೆದುಕೊಂಡ ನಿರ್ಣಯಗಳು ಸಕ್ರಮವೆಂದೇ ತಿಳಿಯಬೇಕು. | |
| ರಂಗಸಮಾಜದ ಅಧ್ಯಕ್ಷರ ಅಥವಾ ಸದಸ್ಯ ಕಾರ್ಯದರ್ಶಿಗಳ ಪೂರ್ವಾನುಮತಿ ಪಡೆಯದೆ ಯಾವುದೇ ಸದಸ್ಯರು ನಿರಂತರವಾಗಿ ಎರಡು ಸಭೆಗಳಿಗೆ ಗೈರುಹಾಜರಾದಲ್ಲಿ ಅಂಥವರ ಸದಸ್ಯತ್ವ ರದ್ದಾಗುತ್ತದೆ. | ರಂಗಸಮಾಜದ ಅಧ್ಯಕ್ಷರ ಅಥವಾ ಸದಸ್ಯ ಕಾರ್ಯದರ್ಶಿಗಳ ಗಮನಕ್ಕೆ ತರದೆ ಯಾವುದೇ ಸದಸ್ಯರು ನಿರಂತರವಾಗಿ ಎರಡು ಸಭೆಗಳಿಗೆ ಗೈರುಹಾಜರಾದಲ್ಲಿ ಅಂಥವರ ಸದಸ್ಯತ್ವ ತಂತಾನೆ ರದ್ದಾಗುತ್ತದೆ. | |

| | | |
|---|---|---|
| ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಉಳಿದೆಲ್ಲ ಸದಸ್ಯರ ನಿರ್ದಿಷ್ಟ ಕಾಲಾವಧಿ ಮುಗಿದ ನಂತರ ಸಾಮಾನ್ಯವಾಗಿ ಅದೇ ವ್ಯಕ್ತಿಗಳನ್ನು ಮುಂದಿನ ಅವಧಿಗೂ ಸದಸ್ಯರನ್ನಾಗಿ ಆಯ್ಕೆ ಮಾಡಲು ಅವಕಾಶವಿಲ್ಲ. ಆದರೆ ವಿಶೇಷ ಸಂಧರ್ಭಗಳಲ್ಲಿ ರಂಗಸಮಾಜಕ್ಕೆ ಅತಿ ಅವಶ್ಯಕವೆಂದು ಕಂಡುಬರುವ ಸದಸ್ಯರನ್ನು ಮುಂದಿನ ಅವಧಿಗೂ ಆಯ್ಕೆ ಮಾಡಬಹುದಾಗಿದೆ. | ರಂಗಸಮಾಜದ ಆಶಯಗಳು ನಿರಂತರವಾಗಿ ಅನುಷ್ಠಾನಗೊಳ್ಳುವುದರಿಂದ, ಕಾರ್ಯಕ್ರಮಗಳು ಮುಂದುವರಿಕೆಯ ಹಿತದೃಷ್ಟಿಯಿಂದ ಹೊಸದಾಗಿ ನಾಮ ನಿರ್ದೇಶನ ಮಾಡುವವರ ಪೈಕಿ ಅಥವಾ ಆ ಸಂದರ್ಭದಲ್ಲಿ ಹಿಂದಿನ ಅವ ಧಿಯ ಕನಿಷ್ಠ ಮೂವರು ಸದಸ್ಯರನ್ನು ಒಂದು ವರ್ಷ ಅವಧಿಗೆ ಮುಂದುವರೆಸಬೇಕು. ಒಂದು ವರ್ಷದ ನಂತರ ಮತ್ತೆ ಆ ಮೂವರು ಹಳೆ ಸದಸ್ಯರ ಬದಲಿಗೆ ಹೊಸ ಮೂವರು ಸದಸ್ಯರನ್ನು ನೇಮಕ ಮಾಡಬೇಕು. ಹೀಗೆ ಹೊಸ ಸದಸ್ಯರನ್ನು ನೇಮಕ ಮಾಡುವಾಗ ರಂಗಸಮಾಜವೇ ಹೊಸ ಸದಸ್ಯರ ಹೆಸರನ್ನು ಶಿಫಾರಸ್ಸು ಮಾಡಬೇಕು. ಒಟ್ಟಾರೆ ಪ್ರತಿ ಸದಸ್ಯರ ಅವಧಿ ನಾಲ್ಕು ವರ್ಷ ಮೀರಬಾರದು. ಈ ಪ್ರಕ್ರಿಯೆ ಪ್ರಾರಂಭದಲ್ಲಿ ಮಾತ್ರ. ಆದರೆ ಮುಂದುವರೆಸುವ ಹಳೆಯ ಮೂವರು ಸದಸ್ಯರ ಅವಧಿ ಐದು ವರ್ಷಗಳಾಗಿರುತ್ತದೆ. | |
| **ಸಾರ್ವತ್ರಿಕ ಮಂಡಳಿ : ಅಧಿಕಾರ ವ್ಯಾಪ್ತಿ**<br>ಸಾರ್ವತ್ರಿಕ ಮಂಡಳಿಯು ರಂಗಸಮಾಜದ ಅತ್ಯುಚ್ಛ ಪ್ರಾಧಿಕಾರ (ಅಥಾರಿಟಿ) ಆಗಿದ್ದು, ಈ ನಿಬಂಧನೆ ಪತ್ರದಲ್ಲಿ ನಾಲ್ಕನೆಯ ವಿಭಾಗದಲ್ಲಿ ಸೂಚಿಸಿದ ಈ ಕೆಳಗಿನ ಎಲ್ಲ 15 ಜನರು ಅದರ ಸದಸ್ಯರಾಗಿರುತ್ತಾರೆ.<br>ಪದನಿಮಿತ್ತ ಸದಸ್ಯರು: ಏಳು(7)<br>ನಾಮನಿರ್ದೇಶನ ಮಾಡಿದ ಸದಸ್ಯರು : ಏಳು (7)<br>ಕೋ–ಆಪ್ಟ್ (ಆಯ್ಕೆ) ಮಾಡಿದ ಸದಸ್ಯರು : ಒಬ್ಬರು(1) | **ಸಾರ್ವತ್ರಿಕ ಮಂಡಳಿ : ಅಧಿಕಾರ ವ್ಯಾಪ್ತಿ**<br>ಸಾರ್ವತ್ರಿಕ ಮಂಡಳಿಯು ರಂಗಸಮಾಜದ ಅತ್ಯುಚ್ಛ ಪ್ರಾಧಿಕಾರ (ಅಥಾರಿಟಿ) ಆಗಿದ್ದು, ಈ ನಿಬಂಧನೆ ಪತ್ರದಲ್ಲಿ ನಾಲ್ಕನೆಯ ವಿಭಾಗದಲ್ಲಿ ಸೂಚಿಸಿದ ಈ ಕೆಳಗಿನವರು ಸದಸ್ಯರಾಗಿರುತ್ತಾರೆ.<br>(1) ರಾಜ್ಯ ಸರ್ಕಾರದಿಂದ ನಾಮನಿರ್ದೇಶನಗೊಂಡ ಸದಸ್ಯರು : ಏಳು (7)<br>(2) ಕೋ–ಆಪ್ಟ್ (ಆಯ್ಕೆ) ಮಾಡಿದ ಸದಸ್ಯರು : ಒಬ್ಬರು(1)<br>(3) ಪದನಿಮಿತ್ತ ಸದಸ್ಯರು | |
| ರಂಗಸಮಾಜದ ಉದ್ದೇಶಗಳಿಗೆ ತಕ್ಕ ಯೋಜನೆಗಳನ್ನು ರೂಪಿಸಿ ಅವುಗಳ ಮೂಲಕ ನೀತಿಗಳನ್ನು ನಿರ್ಧರಿಸಿ, ಅವುಗಳ ನಿರ್ವಹಣೆಗೆ ಬೇಕಾದ ಆರ್ಥಿಕ ಆಡಳಿತಾತ್ಮಕವಾದ ಎಲ್ಲ ಜವಾಬ್ದಾರಿಯನ್ನು ಅ ಧಿಕಾರವನ್ನು ಹೊಂದಿರುವುದು. | ರಂಗಸಮಾಜದ ಉದ್ದೇಶಗಳಿಗೆ ತಕ್ಕ ಯೋಜನೆಗಳನ್ನು ರೂಪಿಸಿ ಅವುಗಳ ಮೂಲಕ ನೀತಿಗಳನ್ನು ನಿರ್ಧರಿಸಿ, ಅವುಗಳ ನಿರ್ವಹಣೆಗೆ ಬೇಕಾದ ಆರ್ಥಿಕ ಆಡಳಿತಾತ್ಮಕವಾದ ಎಲ್ಲ ಜವಾಬ್ದಾರಿಯನ್ನು ಅಧಿಕಾರವನ್ನು ಹೊಂ ದಿರುವುದು. | |
| ರಂಗಾಯಣದ ಆಡಳಿತ ವ್ಯವಸ್ಥೆಗೆ ಬೇಕಾದ ಕಲಾವಿಭಾಗ, ಶಿಕ್ಷಣ, ತಾಂತ್ರಿಕ ವಿಭಾಗ, ಇತ್ಯಾದಿಗಳಿಗೆಲ್ಲಾ ಬೇಕಾಗುವ ಹುದ್ದೆಗಳನ್ನು ಸೃಷ್ಟಿಸಿ ಅವುಗಳ ವೇತನ, ಸೇವಾ ಅವಧ, ನೇಮಕಾತಿ ನಿಯಮಗಳನ್ನು ನಿರ್ಧರಿಸುವುದು. ಎಲ್ಲಾ ಹುದ್ದೆಗಳಿಗೂ ಸೇವಾ ನಿಯಮಗಳನ್ನು ರಚಿಸಿ ಅವುಗಳ ಉಲ್ಲಂಘನೆಯಾದರೆ ಸೂಕ್ತ ಶಿಸ್ತಿನ ಕ್ರಮ ನಿರ್ಧರಿಸುವುದು ಮತ್ತು ಅವಶ್ಯವೆನಿಸಿದಲ್ಲಿ ಕಾನೂನು ಕ್ರಮ ಜರುಗಿಸುವುದು. | ರಂಗಾಯಣದ ಆಡಳಿತ ವ್ಯವಸ್ಥೆಗೆ ಬೇಕಾದ ಕಲಾವಿಭಾಗ, ಶಿಕ್ಷಣ, ತಾಂತ್ರಿಕ ವಿಭಾಗ, ಇತ್ಯಾದಿಗಳಿಗೆ ರಾಜ್ಯ ಸರ್ಕಾರದ ನಿಯಮಗಳಿಗನುಗುಣವಾಗಿ ಅಗತ್ಯ ಹುದ್ದೆಗಳನ್ನು ಸೃಜಿಸುವುದು, ವೇತನ ನಿಗದಿಗೊಳಿಸುವುದು, ನೇಮಕಾತಿ ನಿಯಮಗಳನ್ನು ರೂಪಿಸುವುದು, ಸೇವಾನಿಯಮಗಳನ್ನು ರಚಿಸುವುದು ನಿಯಮಗಳು ಉಲ್ಲಂಘನೆಯಾದರೆ ಶಿಸ್ತಿನ ಕ್ರಮಕ್ಕೆ /ಕಾನೂನು ಕ್ರಮಕ್ಕೆ ಶಿಫಾರಸ್ಸು ಮಾಡುವುದು. | |

| | | |
|---|---|---|
| ರಂಗಸಮಾಜಕ್ಕೆ ಅಗತ್ಯವಿದ್ದಾಗ ರಾಜ್ಯ ಸರ್ಕಾರದ ಕೇಂದ್ರ ಸರ್ಕಾರದ ಅಧಿಕಾರಿಗಳನ್ನು, ಸಿಬ್ಬಂದಿಗಳನ್ನು ನಿಯೋಜನೆ, ಎರವಲು ಸೇವೆಯ ಮುಖಾಂತರ ಪಡೆಯುವುದು. | ಈಗಿರುವಂತೆ | |
| ರಂಗಸಮಾಜಕ್ಕೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಅರೆ ಸರ್ಕಾರಿ ಸಂಸ್ಥೆ, ಖಾಸಗಿ ಸಂಸ್ಥೆ, ವ್ಯಕ್ತಿ ಮತ್ತಿತರ ಸಂಪನ್ಮೂಲಗಳಿಂದ ನಿಯಮಿತವಾಗಿ ಆರ್ಥಿಕ ಬೆಂಬಲ ಲಭ್ಯವಾಗುವಂತೆ ಮಾಡುವುದು. | ರಂಗಸಮಾಜಕ್ಕೆ ರಾಜ್ಯ ಸರ್ಕಾರ, ಕೇಂದ್ರ ಸರ್ಕಾರ, ಅರೆ ಸರ್ಕಾರಿ ಸಂಸ್ಥೆ, ಖಾಸಗಿ ಸಂಸ್ಥೆ, ವ್ಯಕ್ತಿ ಮತ್ತಿತರ ಸಂಪನ್ಮೂಲಗಳಿಂದ ನಿಯಮಿತವಾಗಿ ಆರ್ಥಿಕ ಬೆಂಬಲ ಲಭ್ಯವಾಗುವಂತೆ ಮಾಡುವುದು, ಹೀಗೆ ಲಭ್ಯವಾಗುವ ಸಂಪನ್ಮೂಲಗಳನ್ನು ಆಯಾ ರಂಗಾಯಣಗಳು ರಂಗಸಮಾಜದ ಆಶಯದಂತೆ ಆಶಯಗಳಿಗನುಗುಣವಾಗಿ ಉಸ್ತುವಾರಿ ವಹಿಸುವುದು. ರಂಗಾಯಣಗಳ ಚರಾಸ್ತಿ ಸ್ಥಿರಾಸ್ತಿಗಳ ಸಂರಕ್ಷಣೆ ಕುರಿತು ಮೇಲ್ವಿಚಾರಣೆ ನಡೆಸುವುದು. | |
| ರಂಗಸಮಾಜದ ಉದ್ದೇಶಗಳಿಗೆ ಮತ್ತು ಮೌಲಿಕ ನೀತಿಗಳಿಗೆ ಅನುಗುಣವಾಗಿ ಅವಶ್ಯವಾದ ನಿಬಂಧನೆಗಳನ್ನು ಉಪನಿಬಂಧನೆಗಳನ್ನು ನಿಯಮಾವಳಿಗಳನ್ನು ನಿರ್ಧರಿಸಿ ಜಾರಿಗೆ ತರುವುದು. | ರಂಗಸಮಾಜದ ಉದ್ದೇಶಗಳಿಗೆ ಅನುಗುಣವಾಗಿ ಕಾಲಕಾಲಕ್ಕೆ (ಕನಿಷ್ಠ 10 ವರ್ಷಗಳಿಗೊಮ್ಮೆ) ರಂಗಸಮಾಜದ ಅಂಗರಚನೆಯನ್ನು ಪರಿಷ್ಕರಿಸುವುದು. ಅವಶ್ಯವೆನಿಸಿದಲ್ಲಿ ಉಪನಿಬಂಧನೆಗಳಿಗೆ ತಿದ್ದುಪಡಿ ಮಾಡಿ ಜಾರಿಗೊಳಿಸುವುದು. | |
| **ಸಾರ್ವತ್ರಿಕ ಮಂಡಳಿಯ ವಾರ್ಷಿಕ ಸಭೆ :**<br>ರಂಗಸಮಾಜದ ಮುಖ್ಯ ನೀತಿಗಳನ್ನು ನಿಯಂತ್ರಿಸುವ ಸಾರ್ವತ್ರಿಕ ಮಂಡಳಿಯು ವರ್ಷಕ್ಕೆ ಒಂದು ಬಾರಿ ಪ್ರತಿವರ್ಷದ ಏಪ್ರಿಲ್–ಮೇ ತಿಂಗಳಲ್ಲಿ ವಾರ್ಷಿಕ ಸಭೆ ಸೇರುತ್ತದೆ. ಸಭೆಯ ಅಧ್ಯಕ್ಷತೆಯನ್ನು ರಂಗಸಮಾಜದ ಅಧ್ಯಕ್ಷರು ವಹಿಸುತ್ತಾರೆ. | **ಸಾರ್ವತ್ರಿಕ ಮಂಡಳಿಯ ವಾರ್ಷಿಕ ಸಭೆ :**<br>ರಂಗಸಮಾಜದ ಮುಖ್ಯ ನೀತಿಗಳನ್ನು ನಿಯಂತ್ರಿಸುವ ಸಾರ್ವತ್ರಿಕ ಮಂಡಳಿಯು ಆರ್ಥಿಕ ವರ್ಷದ ಆರಂಭದಲ್ಲಿ ಸಭೆ ಸೇರುತ್ತದೆ. ಈ ಸಭೆಯ ಅಧ್ಯಕ್ಷತೆಯನ್ನು ರಂಗಸಮಾಜದ ಅಧ್ಯಕ್ಷರು ವಹಿಸುತ್ತಾರೆ.<br>**ಸಾರ್ವತ್ರಿಕ ಮಂಡಳಿಯ ಅರೆ ವಾರ್ಷಿಕ ಸಭೆ :**<br>ರಂಗಾಯಣದ ಕಾರ್ಯ ಚಟುವಟಿಕೆಗಳ ಪ್ರಗತಿ ಪರಿಶೀಲನೆ ಮತ್ತು ನೀತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ ಅನುಮೋದನೆ ನೀಡುವುದು. ಹಾಗೂ ಯಾವುದೇ ವಿಷಯಗಳಿಗೆ ಸಂಬಂಧಿಸಿದ ಕಾರ್ಯ ನಿರ್ವಾಹಕ ಮಂಡಳಿಯು ಸಿದ್ಧಪಡಿಸಿ ಮಂಡಿಸುವ ನೇಮಕಾತಿ, ನೇಮಕಾತಿ ರದ್ದುಗೊಳಿಸುವುದು, ಶಿಸ್ತುಕ್ರಮಗಳ ಬಗ್ಗೆ, ಆಡಳಿತಾತ್ಮಕವಾದ ಯಾವುದೇ ವಿಷಯಗಳಿಗೆ ಸಂಬಂಧಿಸಿದಂತೆ ಈ ಸಭೆಯು ನಿರ್ಣಯಗಳನ್ನು ಕೈಗೊಳ್ಳುವುದು. | **ಸಾರ್ವತ್ರಿಕ ಮಂಡಳಿ ಸಭೆ :**<br>ರಂಗಸಮಾಜದ ಮುಖ್ಯ ನೀತಿಗಳನ್ನು ನಿಯಂತ್ರಿಸುವ ಸಾರ್ವತ್ರಿಕ ಮಂಡಳಿಯು ಆರ್ಥಿಕ ವರ್ಷದ ಆರಂಭದಲ್ಲಿ ಮತ್ತು ಆರ್ಥಿಕ ವರ್ಷದ ಅಂತ್ಯದಲ್ಲೆ ಎರಡು ಸಭೆಗಳನ್ನು ನಡೆಸಿ ರಂಗಾಯಣಗಳ ಚಟುವಟಿಕೆಗಳನ್ನು ರೂಪಿಸುವ ಮತ್ತು ಮೌಲ್ಯ ಮಾಪನ ಮಾಡುವ ಜವಾಬ್ದಾರಿಗಳನ್ನು ನಿರ್ವಹಿಸುವುದು. ಯಾವುದೇ ತುರ್ತು ಸಂದರ್ಭದಲ್ಲಿ ನಾಮ ನಿರ್ದೇಶಿತ ಸದಸ್ಯರ ಶೇ 50% ಕ್ಕಂತ ಹೆಚ್ಚಿನ ಸದಸ್ಯರು ಕೋರಿಕೆ ಸಲ್ಲಿಸಿದಲ್ಲಿ ಒಂದು ವಿಶೇಷ ಸಾರ್ವತ್ರಿಕ ಮಂಡಳಿ ಸಭೆಯನ್ನು ನಡೆಸಲು ಅವಕಾಶವಿರುತ್ತದೆ. |

| | | |
|---|---|---|
| **ವಾರ್ಷಿಕ ಸಭೆಯ ಕಾರ್ಯಸೂಚಿ:** ನಿರ್ವಾಹಕ ಮಂಡಳಿಯು ಸಲ್ಲಿಸುವ ವಾರ್ಷಿಕ ವರದಿಯ ಆಧಾರದ ಮೇಲೆ ರಂಗಸಮಾಜದ ಸ್ಥಿತಿಗತಿಗಳ ಪರಾಮರ್ಶೆ ನಡೆಯುತ್ತದೆ.<br>ನಿರ್ವಾಹಕ ಮಂಡಳೀಯು ಸಭೆ ಸೇರಿ ತೆಗೆದುಕೊಂಡ ನಿರ್ಣಯಗಳ ಪರಿಶೀಲನೆ ಮತ್ತು ಅನುಮೋದನೆಯಾಗುತ್ತದೆ.<br>ಹಿಂದಿನ ವರ್ಷದ ಪರಿಶೋಧಿತ ಲೆಕ್ಕಪತ್ರಗಳ ವಿವರ ಪತ್ರದ ಮಂಜೂರಾತಿಯಾಗುತ್ತದೆ.<br>ಮುಂಬರುವ ವರ್ಷದ ಲೆಕ್ಕಪತ್ರಗಳ ತನಿಖೆ ಮಾಡಲು ಲೆಕ್ಕಪರಿಶೋಧಕರ ನೇಮಕಾತಿಯಾಗುತ್ತದೆ.<br>ಮುಂಬರುವ ವರ್ಷದ ಕಾರ್ಯಚಟುವಟಿಕೆಗಳನ್ನು ಮತ್ತಿತರ ಹೊಸ ಯೋಜನೆಗಳನ್ನು ಚರ್ಚಿಸಿ ತೀರ್ಮಾನಿಸುತ್ತದೆ. | **ಸಾರ್ವತ್ರಿಕ ಮಂಡಳಿಯ ಸಭೆಯ ಕಾರ್ಯಸೂಚಿ:**<br>(1) ಕಾರ್ಯನಿರ್ವಾಹಕ ಮಂಡಳಿಯು ಸಲ್ಲಿಸುವ ವಾರ್ಷಿಕ ವರದಿಯ ಆಧಾರದ ಮೇಲೆ ರಂಗಸಮಾಜದ ಸ್ಥಿತಿಗತಿಗಳ ಪರಾಮರ್ಶೆ ನಡೆಸುವುದು.<br>(2) ಕಾರ್ಯನಿರ್ವಾಹಕ ಮಂಡಳೀಯು ಸಭೆ ಸೇರಿ ತೆಗೆದುಕೊಂಡ ನಿರ್ಣಯಗಳ ಪರಿಶೀಲನೆ ಮತ್ತು ಅನುಮೋದನೆ.<br>(3) ಹಿಂದಿನ ವರ್ಷದ ಹಣ ಬಳಕೆ ಮತ್ತು ಚಟುವಟಿಕೆಗಳ ಪರಿಶೀಲನೆ ಮತ್ತು ಅನುಮೋದನೆ.<br>(4) ಮುಂಬರುವ ವರ್ಷದ ಲೆಕ್ಕಪತ್ರಗಳ ತನಿಖೆ ಮಾಡಲು ಲೆಕ್ಕಪರಿಶೋಧಕರ ನೇಮಕಾತಿ.<br>(5) ಮುಂಬರುವ ವರ್ಷದ ಕಾರ್ಯಚಟುವಟಿಕೆಗಳ ಕುರಿತು ಕ್ರಿಯಾಯೋಜನೆ ಮತ್ತು ಆಯ–ವ್ಯಯ ಅನುಮೋದನೆ.<br>(6) ಅಧ್ಯಕ್ಷರ ಅಪ್ಪಣೆಯ ಮೇರೆಗೆ ಇತರೆ ವಿಷಯಗಳು. | |
| **ಸಾರ್ವತ್ರಿಕ ಮಂಡಳಿಯ ವಿಶೇಷ ಸಭೆ** : ಯಾವುದಾದರೂ ತುರ್ತು ವಿಷಯದ ಬಗೆಗೆ ನಿರ್ದಿಷ್ಟ ನಿರ್ಧಾರಕ್ಕೆ ಬರಲು ಅಗತ್ಯವೆಂದು ರಂಗಸಮಾಜದ ಸದಸ್ಯ ಸಂಖ್ಯೆಯ ಎರಡನೇ ಮೂರರಷ್ಟು ಸಂಖ್ಯೆಯ ಸದಸ್ಯರು ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿಗಳಿಗೆ ಅರ್ಜಿ ಸಲ್ಲಿಸಿದಲ್ಲಿ ಸಹ ವಿಶೇಷ ಸಾರ್ವತ್ರಿಕ ಸಭೆಯನ್ನು ಕರೆಯಲಾಗುತ್ತದೆ. | **ಸಾರ್ವತ್ರಿಕ ಮಂಡಳಿಯ ವಿಶೇಷ ಸಭೆ** :<br>ಯಾವುದಾದರೂ ತುರ್ತು ವಿಷಯದ ಬಗೆಗೆ ನಿರ್ದಿಷ್ಟ ನಿರ್ಧಾರಕ್ಕೆ ಬರಲು ಅಗತ್ಯವೆಂದು ರಂಗಸಮಾಜದ ನಾಮ ನಿರ್ದೇಶಿತ ಸದಸ್ಯರ ಸಂಖ್ಯೆಯ ಎರಡನೇ ಮೂರರಷ್ಟು ಸಂಖ್ಯೆಯ ಸದಸ್ಯರು ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿಗಳ ಮೂಲಕ ಅಧ್ಯಕ್ಷರಿಗೆ ಮನವಿ ಸಲ್ಲಿಸಿದಾಗ ಕೂಡ ವಿಶೇಷ ಸಾರ್ವತ್ರಿಕ ಸಭೆಯನ್ನು ಕರೆಯಬಹುದಾಗಿದೆ. | |

| | | |
|---|---|---|
| **ಕಾರ್ಯನಿರ್ವಾಹಕ ಮಂಡಳಿ: ರಚನೆ** : ಸಾರ್ವತ್ರಿಕ ಮಂಡಳಿಯು ರಚಿಸುವ ರಂಗಸಮಾಜದ ನಿರ್ವಾಹಕ ಮಂಡಳಿಯಲ್ಲಿ ಈ ಕೆಳಗಿನ 7 ಜನ ಸದಸ್ಯರಿರುತ್ತಾರೆ.<br>ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳು ಅಧ್ಯಕ್ಷರಾಗಿರುತ್ತಾರೆ.<br>ರಾಜ್ಯ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮುಖ್ಯಸ್ಥರು 'ಸದಸ್ಯ ಕಾರ್ಯದರ್ಶಿ'ಗಳು ಆಗಿರುತ್ತಾರೆ.<br>ರಂಗಾಯಣದ/ಗಳ ನಿರ್ದೇಶಕರು<br>ರಾಜ್ಯದ ಆರ್ಥಿಕ ಇಲಾಖೆಯ ಕಮಿಷನರ್ ಅಥವಾ ಅವರ ಪ್ರತಿನಿಧಿಗಳು.<br>ಸಾರ್ವತ್ರಿಕ ಮಂಡಳಿಯು ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ತನ್ನ ಉಳಿದ ಸದಸ್ಯರಲ್ಲಿ ನಾಮನಿರ್ದೇಶನ ಮಾಡುವ 3 ಜನ ಸದಸ್ಯರು.<br>ಸಾರ್ವತ್ರಿಕ ಮಂಡಳಿಯ ನಿರ್ದೇಶನಕ್ಕೊಳಪಟ್ಟಿರುವ ನಿರ್ವಾಹಕ ಮಂಡಳಿಯು ಕನಿಷ್ಠ ಎರಡು ತಿಂಗಳಿಗೊಮ್ಮೆ ರಾಜ್ಯದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತದೆ. | **ಕಾರ್ಯನಿರ್ವಾಹಕ ಮಂಡಳಿ: ರಚನೆ** : ಸಾರ್ವತ್ರಿಕ ಮಂಡಳಿಯು ರಚಿಸುವ ರಂಗಸಮಾಜದ ನಿರ್ವಾಹಕ ಮಂಡಳಿಯಲ್ಲಿ ಈ ಕೆಳಗಿನವರು ಸದಸ್ಯರಿರುತ್ತಾರೆ.<br><br>**ಅಧ್ಯಕ್ಷರು:** ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು.<br>**ಸದಸ್ಯರು:** ರಾಜ್ಯಸರ್ಕಾರದಿಂದ ನಾಮನಿರ್ದೇಶನಗೊಂಡಿರುವ ರಂಗಾಯಣಗಳ ನಿರ್ದೇಶಕರು ಹಾಗೂ ರಂಗಸಮಾಜವು ಸಾರ್ವತ್ರಿಕ ಮಂಡಳಿಯಲ್ಲಿ ಆಯ್ಕೆ ಮಾಡುವ ನಾಲ್ಕು ಜನ ಸದಸ್ಯರು ಮತ್ತು ರಾಜ್ಯದ ಆರ್ಥಿಕ ಇಲಾಖೆಯ ಜಂಟಿ ಕಾರ್ಯದರ್ಶಿಗಳು.<br><br>**ಸದಸ್ಯ ಕಾರ್ಯದರ್ಶಿ:** ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ 'ಎ' ಗುಂಪಿನ ಹಿರಿಯ ಅಧಿಕಾರಿ.<br><br>ಕಾರ್ಯ ನಿರ್ವಾಹಕ ಮಂಡಳಿಯು ಕನಿಷ್ಠ 2 ತಿಂಗಳಿಗೊಮ್ಮೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಸಭೆ ಸೇರುತ್ತದೆ ಹಾಗೂ ಪ್ರತಿ ಸಭೆಯನು ಕಡ್ಡಾಯವಾಗಿ ರಾಜ್ಯದ ಬೇರೆ ಬೇರೆ ರಂಗಾಯಣಗಳ ಆವರಣದಲ್ಲಿ ನಡೆಸತಕ್ಕದ್ದು. | ರಂಗಸಮಾಜದ ಉಪಾಧ್ಯಕ್ಷರು ಸಾರ್ವತ್ರಿಕ ಮಂಡಳಿ ಸಭೆಯ ಅಧ್ಯಕ್ಷತೆಯನ್ನು ಹೊರತುಪಡಿಸಿ ಉಳಿದೆಲ್ಲ ಸಭೆಯ ಅಧ್ಯಕ್ಷತೆವಹಿಸುವುದು.<br><br>ಕಾರ್ಯ ನಿರ್ವಾಹಕ ಮಂಡಳಿ ಸಭೆಯು ಪ್ರತಿ 2 ತಿಂಗಳಿಗೊಮ್ಮೆ ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದಲ್ಲಿ ಕರೆಯುವುದು. ಅವಶ್ಯವಿದ್ದಲ್ಲಿ ಬೇರೆ–ಬೇರೆ ರಂಗಾಯಣಗಳ ಕೇಂದ್ರಸ್ಥಾನದಲ್ಲೂ ಕರೆಯಬಹುದು. |
| **ನಿರ್ವಾಹಕ ಮಂಡಳಿಯ ಅಧಿಕಾರ ವ್ಯಾಪ್ತಿ:**<br>ರಂಗಸಮಾಜದ ಆಡಳಿತಾತ್ಮಕ ಆರ್ಥಿಕ ಮತ್ತು ಹಣಕಾಸಿನ ಎಲ್ಲ ವ್ಯವಹಾರಗಳನ್ನು ನಿರ್ವಹಿಸುವುದು. ರಂಗಸಮಾಜದ ಎಲ್ಲ ಆಸ್ತಿಪಾಸ್ತಿಗಳ ಉಸ್ತುವಾರಿ ಮಾಡುವುದು ಮತ್ತು ಸಂರಕ್ಷಿಸುವುದು. | ಈಗಿರುವಂತೆ | |
| ರಾಜ್ಯ ಸರ್ಕಾರದಿಂದ ನಿಯಮಿತವಾಗಿ ಅನುದಾನ ಬರುವಂತೆ ನೋಡಿಕೊಳ್ಳುವುದು ಮತ್ತು ಸೂಕ್ತ ಮೂಲಗಳಿಂದ ರಂಗಸಮಾಜಕ್ಕೆ ಚರ ಮತ್ತು ಸ್ಥಿರಾಸ್ತಿಯನ್ನು, ಅನುದಾನ ಮತ್ತು ಠೇವಣಿಗಳನ್ನು (ಫಂಡ್ಸ್ ಮತ್ತು ಗ್ರಾಂಟ್ಸ್) ಸಂಪಾದಿಸುವುದು. ಹಾಗೆ ಮಾಡುವಾಗ ರಂಗಸಮಾಜದ ಉದ್ದೇಶಗಳಿಗೆ ವಿರುದ್ಧವಾದ ಕರಾರು ಮತ್ತು ಒಪ್ಪಂದ ಆಗದಂತೆ ಎಚ್ಚರ ವಹಿಸುವುದು. | ಈಗಿರುವಂತೆ | |
| ರಂಗಸಮಾಜದ ಪರವಾಗಿ ಒಪ್ಪಂದಗಳನ್ನು, ಕರಾರುಗಳನ್ನು ಚರ್ಚೆಯ ಮೂಲಕ ತಲುಪಿ ಅಂಥ ಒಪ್ಪಂದ ಮತ್ತು ಕರಾರುಗಳನ್ನು ಅಧಿಕೃತವಾಗಿ ಮಾಡಿಕೊಂಡು ಅವುಗಳನ್ನು ಜಾರಿಗೆ ತರುವುದು. | ಈಗಿರುವಂತೆ | |
| ಬಾಂಡು, ಡಿಬೆಂಚರ್, ಪ್ರಾಮಿಸರಿ ನೋಟು ಅಥವಾ ಇಂಥ ಇತರ 'ಕರಾರುಬಂಧ' ಪತ್ರಗಳ ಮೂಲಕ ಅಥವಾ ರಂಗಸಮಾಜಕ್ಕೆ ಸೇರಿದ | ಈಗಿರುವಂತೆ | |

| | | |
|---|---|---|
| ಯಾವುದೇ ಚರ ಅಥವಾ ಸ್ಥಿರಾಸ್ತಿಯನ್ನು ಮಾರ್ಟ್‌ಗೇಜ್, ಲೀಸ್, ಹೈಪಾಥಿಕೇಟ್ ಅಥವಾ ಅಡ ಇಡುವುದರ ಮೂಲಕ ರಂಗಸಮಾಜದ ಪರವಾಗಿ ಹಣಕಾಸಿನ ಸಾಲ ಅಥವಾ ಹಣ ಸಂಗ್ರಹ ಮಾಡುವುದು. | | |
| ಮುಖ್ಯ ನಿಯಮಗಳೊಡನೆ ಸಂಪೂರ್ಣ ಸಾಮರಸ್ಯವಿರುವ ರೀತಿಯಲ್ಲಿ ಉಪನಿಯಮಗಳನ್ನು ರಚಿಸಿ ವಿಶೇಷ ಸಾರ್ವತ್ರಿಕ ಮಂಡಳಿಯ ಸಭೆಯಲ್ಲಿ ಅನುಮೋದನೆ ಪಡೆಯುವುದು. | ಈಗಿರುವಂತೆ | |
| ಸಾರ್ವತ್ರಿಕ ಮಂಡಳಿಯ ನಿರ್ಣಯಗಳಿಗನುಸಾರವಾಗಿ ರಂಗಸಮಾಜಕ್ಕೆ ಕಾಲಕಾಲಕ್ಕೆ ಅಗತ್ಯವಿರುವ ಸಿಬ್ಬಂದಿ ವರ್ಗವನ್ನು ಸಂಬಳ ನಿಗದಿ ಮಾಡಿ ನೇಮಕಾತಿ ಮಾಡುವುದು ಮತ್ತು ಸರ್ಕಾರದ ಅಧಿಕಾರಿಗಳನ್ನು ಸಿಬ್ಬಂದಿಗಳನ್ನು ನಿಯೋಜನೆ–ಎರವಲು ಸೇವೆಗೆ ಪಡೆಯುವುದು. ಅಗತ್ಯ ಬಿದ್ದಾಗ ತನ್ನಿಂದ ನೇಮಕಾತಿ ಹೊಂದಿರುವ ಸಿಬ್ಬಂದಿವರ್ಗದ ಯಾವುದೇ ವ್ಯಕ್ತಿಯ ವಿರುದ್ಧ ಶಿಸ್ತಿನ ಕ್ರಮ / ಕಾನೂನಿನ ಕ್ರಮವನ್ನು ಜಾರಿಗೆ ತರುವುದು. | ಈಗಿರುವಂತೆ | |
| ರಂಗಸಮಾಜದ ಯೋಜನೆಗಳಿಗೆ ತಕ್ಕಂತೆ ಸಲಹಾ ಸಮಿತಿಗಳನ್ನು ಮತ್ತು ವಿಶೇಷ ಸಮಿತಿಗಳನ್ನು ರಚಿಸಿ ಅವುಗಳ ಹೊಣೆಯನ್ನು ನಿರ್ಧರಿಸುವುದು. ಅಂತೆಯೇ ನಿರ್ಧರಿಸಿದ ಕೆಲಸ ಮುಗಿದಾಗ ಆ ಸಮಿತಿಗಳನ್ನು ವಿಸರ್ಜಿಸುವುದು. | ಈಗಿರುವಂತೆ | |
| ರಂಗಸಮಾಜದ ಉದ್ದೇಶಗಳಿಗೆ ಪ್ರಾಸಂಗಿಕವಾಗಿ ಅಥವಾ ಮೂಲಭೂತವಾಗಿ ನೆರವಾಗುವ ಹಾಗೆ ಸಾರ್ವತ್ರಿಕ ಮಂಡಳಿಯು ನಿರ್ಧರಿಸಿದ ರೀತಿ ನೀತಿಗಳನ್ನು ಜಾರಿಗೆ ತರಲು ಎಲ್ಲ ಕ್ರಮಗಳನ್ನು ಕೈಗೊಳ್ಳುವುದು. | ಈಗಿರುವಂತೆ | |
| ರಂಗಾಯಣ/ಗಳು ಮತ್ತಿತರ ಅಂಗಸಂಸ್ಥೆಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವಂತೆ ಮತ್ತು ಸಿಬ್ಬಂದಿಯಲ್ಲಿ ಶಿಸ್ತು ಸಂಯಮಗಳು ಇರುವಂತೆ ನೋಡಿಕೊಳ್ಳುವುದು. | ಈಗಿರುವಂತೆ | |
| ರಂಗಸಮಾಜದ ಉದ್ದೇಶಗಳಿಗೆ ಮತ್ತು ನಿಯಮಗಳಿಗೆ ಸಾರ್ವತ್ರಿಕ ಮಂಡಳಿಯು ನಿರ್ಧರಿಸಿದ ನೀತಿ ನಿರ್ಧಾರಗಳಿಗೆ ಮತ್ತು ನಿಗಧಿತ ವಾರ್ಷಿಕ ವೆಚ್ಚಕ್ಕೆ ಬದ್ಧವಾಗಿರತಕ್ಕದ್ದು. | ಈಗಿರುವಂತೆ | |

| | | |
|---|---|---|
| **ಸಭಾ ಸೂಚನೆ, ಅಧ್ಯಕ್ಷತೆ, ಮತಚಲಾವಣೆ, ಅವಶ್ಯಕ ಇತ್ಯಾದಿ** **ಸಭೆಯ ಮುನ್ಸೂಚನೆ:** ಸಾಮಾನ್ಯ ಅಥವಾ ವಿಶೇಷ ಸಾರ್ವತ್ರಿಕ ಮಂಡಳಿ ಸಭೆ ಮತ್ತು ನಿರ್ವಾಹಕ ಮಂಡಳಿಯ ಸಭೆ ಸೇರುವ ಹತ್ತು ದಿನಗಳ ಮುನ್ನ ಆಬಗ್ಗೆ ಎಲ್ಲ ಸದಸ್ಯರಿಗೆ ಲಿಖಿತ ಸೂಚನಾ ಪತ್ರಗಳನ್ನು ಸದಸ್ಯ ಕಾರ್ಯದರ್ಶಿಗಳ ನೀಡಬೇಕು. | ಈಗಿರುವಂತೆ | |
| **ಸದಸ್ಯರ ಸೂಚನೆಗೆ ಕಾಲ:** ರಂಗಸಮಾಜದ ಕಾರ್ಯಚಟುವಟಿಕೆ, ಯೋಜನೆ ಮುಂತಾದವುಗಳ ಬಗ್ಗೆ ಸಲಹೆ, ಸೂಚನೆಗಳನ್ನು ಯಾವುದೇ ಸದಸ್ಯರು ಸಭೆಯಲ್ಲಿ ಮಂಡಿಸಬೇಕಾದಲ್ಲಿ ಅಂಥ ಸೂಚನೆಗಳನ್ನು ಸಭೆ ಸೇರುವ ಒಂದು ತಿಂಗಳ ಮುಂದೆ ಲಿಖಿತ ರೂಪದಲ್ಲಿ ಸದಸ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕು. | ಈಗಿರುವಂತೆ | |
| ಎಲ್ಲ ಸಾರ್ವತ್ರಿಕ ಮಂಡಳಿಗಳ ಸಭೆಯ ಅಧ್ಯಕ್ಷತೆಯನ್ನು ರಂಗಸಮಾಜದ ಅಧ್ಯಕ್ಷರು ವಹಿಸುತ್ತಾರೆ. ಮತ್ತು ನಿರ್ವಾಹಕ ಮಂಡಳಿಯ ಅಧ್ಯಕ್ಷತೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸರ್ಕಾರದ ಕಾರ್ಯದರ್ಶಿಗಳು ವಹಿಸುತ್ತಾರೆ. ಈ ಅಧ್ಯಕ್ಷರ ಅನುಪಸ್ಥಿತಿಯಲ್ಲಿ ಅಥವಾ ಆ ಸ್ಥಾನ ತೆರವಾದಲ್ಲಿ ಸದರಿ ಸಭೆಗಳ ಸದಸ್ಯರೇ ತಮ್ಮೊಳಗೊಬ್ಬ ಅಧ್ಯಕ್ಷರನ್ನು ಆಯ್ಕೆ ಮಾಡುತ್ತಾರೆ. | ಎಲ್ಲ ಸಾರ್ವತ್ರಿಕ ಮಂಡಳಿಗಳ ಸಭೆಯ ಅಧ್ಯಕ್ಷತೆಯನ್ನು ರಂಗಸಮಾಜದ ಅಧ್ಯಕ್ಷರು ವಹಿಸುತ್ತಾರೆ. ಮತ್ತು ಕಾರ್ಯ ನಿರ್ವಾಹಕ ಮಂಡಳಿಯ ಅಧ್ಯಕ್ಷತೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರು ವಹಿಸುತ್ತಾರೆ. ಸಾರ್ವತ್ರಿಕ ಮಂಡಳಿಯ ಅಧ್ಯಕ್ಷರು ಒಂದು ವೇಳೆ ಸಭೆಗೆ ಗೈರುಹಾಜರಾಗುವ ಸಂದರ್ಭ ಬಂದಲ್ಲಿ, ಅವರ ಅನುಪಸ್ಥಿತಿಯಲ್ಲಿ ಸಭೆಯ ಕಾರ್ಯ ಕಲಾಪವನ್ನು ನಡೆಸಲು ಉಪಾಧ್ಯಕ್ಷರಿಗೆ ಲಿಖಿತವಾಗಿ ತಿಳಿಸಿ, ಅಧಿಕಾರ ನೀಡುವುದು. ಹೀಗೆ ಅಧ್ಯಕ್ಷರ ಲಿಖಿತ ಅನುಮತಿಯ ಮೇರೆಗೆ ಉಪಾಧ್ಯಕ್ಷರು ಅಧ್ಯಕ್ಷತೆ ವಹಿಸುವ ಸಭೆಯಲ್ಲಿ ಅಧ್ಯಕ್ಷರಿಗೆ ಪ್ರದತ್ತವಾಗಿರುವ ಎಲ್ಲಾ ಅಧಿಕಾರವನ್ನು ಚಲಾಯಿಸುವ ಹಾಗೂ ನಿರ್ಣಯಿಸುವ ಅಧಿಕಾರವನ್ನು ಹೊಂದಿರುತ್ತಾರೆ. | |
| **ಮತ ಚಲಾವಣೆ:** ಯಾವುದೇ ಸಭೆಯಲ್ಲಿ ಪ್ರತಿ ಸದಸ್ಯನಿಗೆ ಒಂದು ಮತ ಚಲಾಯಿಸುವ ಹಕ್ಕಿರುತ್ತದೆ. ಸಭೆಯ ಅಧ್ಯಕ್ಷತೆ ವಹಿಸುತ್ತಿರುವ ವ್ಯಕ್ತಿಗೆ ಅಗತ್ಯವಾದಲ್ಲಿ ಎರಡನೆಯ ಮತ ಚಲಾಯಿಸುವ ಹಕ್ಕಿರುತ್ತದೆ. | **ಮತ ಚಲಾವಣೆ:** ಯಾವುದೇ ಸಭೆಯಲ್ಲಿ ಪ್ರತಿ ಸದಸ್ಯನಿಗೆ ಒಂದು ಮತ ಚಲಾಯಿಸುವ ಹಕ್ಕಿರುತ್ತದೆ. ಸದಸ್ಯರುಗಳ ಅಭಿಪ್ರಾಯಗಳು ಸಮಾನಾದ ಪ್ರಕ್ಷದಲ್ಲಿ ಅಧ್ಯಕ್ಷರು ನಿರ್ಣಯದ ಪರ ಅಥವಾ ವಿರುದ್ಧವಾಗಿ ತಮ್ಮ ಹೆಚ್ಚುವರಿ ಒಂದು ಮತ ಚಲಾಯಿಸುವ ಮೂಲಕ ನಿರ್ಣಯಗಳನ್ನು ಕೈಗೊಳ್ಳಬಹುದು. | |

| | | |
|---|---|---|
| **ಅವಶ್ಯಕ ಸಂಖ್ಯೆ (ಕೋರಂ):**<br>ಸಾರ್ವತ್ರಿಕ ಮಂಡಳಿ ಮತ್ತು ನಿರ್ವಾಹಕ ಮಂಡಳಿಗೆ ಕಾರ್ಯನಿರ್ವಹಣೆಯ ಅಧಿಕಾರ ಚಲಾಯಿಸಲು ಒಟ್ಟು ಸದಸ್ಯ ಸಂಖ್ಯೆಯ ಮೂರನೆಯ ಒಂದರಷ್ಟು ಸದಸ್ಯರಾದರೂ ಸಭೆಯಲ್ಲಿ ಇರಬೇಕು(ಕೋರಂ). ಈ ಅವಶ್ಯಕ ಸಂಖ್ಯೆಯಷ್ಟು ಸದಸ್ಯರು ಹಾಜರಿಲ್ಲದ ಕಾರಣ ಒಮ್ಮೆ ಮುಂದೂಡಲಾದ ಸಭೆಯು ಮತ್ತೆ ಸೇರಿದಾಗ ಅದಕ್ಕೆ ಅವಶ್ಯಕ ಸಂಖ್ಯೆ ಬೇಕಾಗುವುದಿಲ್ಲ. | ಈಗಿರುವಂತೆ | |
| **ಸದಸ್ಯರ ಸಭಾಭತ್ಯೆ–ಪ್ರವಾಸ ಭತ್ಯೆ:**<br>ರಂಗಸಮಾಜದ ಸಾರ್ವತ್ರಿಕ ಮಂಡಳಿ, ನಿರ್ವಾಹಕ ಮಂಡಳಿ ಮತ್ತಿತರ ಸಮಿತಿ, ಉಪಸಮಿತಿಗಳಿಗೆ ಹಾಜರಾಗುವ ಎಲ್ಲ ಸ್ಥಳೀಯ ಸದಸ್ಯರ ಸಭಾಭತ್ಯೆಯನ್ನು ಮತ್ತು ಪರಸ್ಥಳದ ಸದಸ್ಯರಿಗೆ ಸಭಾ ಭತ್ಯೆ, ಪ್ರವಾಸ ಭತ್ಯೆ, ಊಟ ವಸತಿ ಭತ್ಯೆಗಳನ್ನು ನಿಯಮಾನುಸಾರ ರಂಗಸಮಾಜದ ವಿಧಿಯಿಂದ ನೀಡಬೇಕು. | **ಸದಸ್ಯರ ಸಭಾಭತ್ಯೆ–ಪ್ರವಾಸ ಭತ್ಯೆ:**<br>ರಂಗಸಮಾಜದ ನಾಮ ನಿರ್ದೇಶಿತ ಮತ್ತು ಕೋ–ಆಪ್ಟ್ ಸದ್ಯರು ಸಾರ್ವತ್ರಿಕ ಮಂಡಳಿ ಹಾಗೂ ಕಾರ್ಯನಿರ್ವಾಹಕ ಸಭೆ ಹಾಗೂ ಉಪಸಮಿತಿ ಸಭೆಗಳಲ್ಲಿ ಭಾಗವಹಿಸಿದಾಗ ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಮಾದರಿಯಲ್ಲಿ ಸಭಾ ಭತ್ಯೆ, ಪ್ರಯಾಣ ಭತ್ಯೆ ಮತ್ತು ದಿನಭತ್ಯೆ ನೀಡುವುದು. ರಂಗಸಮಾಜದ ಸದ್ಯಸರು ವಿಶೇಷ ಸಂದರ್ಭಗಳಾದ ನೇಮಕಾತಿ ಸಂದರ್ಶನ, ಮೌಲ್ಯಮಾಪನ ಪರಿಶೀಲನೆ/ವಿಚಾರಣೆ, ತರಬೇತಿ ಮತ್ತು ಉತ್ಸವಗಳಲ್ಲಿ ವಿಷಯ ತಜ್ಞರಾಗಿ ಭಾಗವಹಿಸುವಾಗ ನೀಡುವ ಸೇವೆಯನ್ನಾಧರಿಸಿ, ಗೌರವ ಸಂಭಾವನೆ ಭತ್ಯೆಯನ್ನು ನೀಡಬೇಕು ಮತ್ತು ಈ ಭತ್ಯೆಗಳನ್ನು ಕಾಲಕಾಲಕ್ಕೆ ಸೂಕ್ತವಾಗಿ ಪರಿಷ್ಕರಿಸಿ ರಂಗಸಮಾಜ ನಿಗದಿಗೊಳಿಸಬೇಕು. | I). ಪ್ರಯಾಣ ಭತ್ಯೆ, ದಿನಭತ್ಯೆಯನ್ನು ಸರ್ಕಾರಿ ನಿಯಮಾನುಸಾರ ಪಾವತಿಸುವುದು. ಸಭಾಭತ್ಯೆಯನ್ನು ದಿನವೊಂದಕ್ಕೆ ರೂ.1000/–ಗಳನ್ನು ಪಾವತಿಸುವುದು.<br>II) ಮೌಲ್ಯಮಾಪನ, ಸಂದರ್ಶನ, ಪರಿಶೀಲನೆ, ವಿಚಾರಣೆ ಮುಂತಾದವಕ್ಕೆ ಕರೆಸುವ ಸಂದರ್ಭದಲ್ಲಿ ದಿನಕ್ಕೆ ರೂ. 5,000/– ಸಂಭಾವನೆ ಪಾವತಿಸುವುದು. |
| **ಪದಾಧಿಕಾರಿಗಳು:**<br>ರಂಗಸಮಾಜದಲ್ಲಿ ಈ ಕೆಳಗೆ ಸೂಚಿಸಿದ ಪದಾಧಿಕಾರಿಗಳು ಇರುತ್ತಾರೆ.<br>1. ಅಧ್ಯಕ್ಷರು<br>2. ಸದಸ್ಯ ಕಾರ್ಯದರ್ಶಿಗಳು<br>3. ನಿರ್ದೇಶಕರು | **ಪದಾಧಿಕಾರಿಗಳು:**<br>ರಂಗಸಮಾಜದಲ್ಲಿ ಈ ಕೆಳಗೆ ಸೂಚಿಸಿದ ಪದಾಧಿಕಾರಿಗಳು ಇರುತ್ತಾರೆ.<br>1. ಅಧ್ಯಕ್ಷರು<br>2. ಉಪಾಧ್ಯಕ್ಷರು<br>3. ಸದಸ್ಯ ಕಾರ್ಯದರ್ಶಿಗಳು | |

| | | |
|---|---|---|
| **ಪದಾಧಿಕಾರಿಗಳ ಜವಾಬ್ದಾರಿಗಳು: 1).ಅಧ್ಯಕ್ಷರು:** ಎಲ್ಲ ಸಾರ್ವತ್ರಿಕ ಸಭೆಗಳ ಅಧ್ಯಕ್ಷತೆ ವಹಿಸುವುದು ಮತ್ತು ರಾಜ್ಯ ಸರ್ಕಾರದಿಂದ ನಿಯಮಿತವಾಗಿ ಅನುದಾನ ಬಿಡುಗಡೆಯಾಗುವಂತೆ ಆಸ್ಥೆ ವಹಿಸುವುದು.<br>ರಂಗಸಮಾಜದ ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಹಾರವನ್ನು ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದು.<br>ರಂಗಸಮಾಜದ ಹಿತಾಸಕ್ತಿಗಾಗಿ ಅಗತ್ಯ ಬಿದ್ದಾಗೆಲ್ಲಾ ಸರ್ಕಾರಿ ವಲಯದಲ್ಲಿ ತುರ್ತು ಕ್ರಮಗಳನ್ನು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವುದು.<br>ರಂಗಸಮಾಜದ ಎಲ್ಲ ಉದ್ದೇಶಗಳು, ಯೋಜನೆಗಳು ಫಲಪ್ರದವಾಗುವತ್ತ ಕಾಳಜಿ ವಹಿಸುವುದು. | **ಪದಾಧಿಕಾರಿಗಳ ಜವಾಬ್ದಾರಿಗಳು:**<br>**1).ಅಧ್ಯಕ್ಷರು:** ಎಲ್ಲ ಸಾರ್ವತ್ರಿಕ ಸಭೆಗಳ ಅಧ್ಯಕ್ಷತೆ ವಹಿಸುವುದು ಮತ್ತು ರಾಜ್ಯ ಸರ್ಕಾರದಿಂದ ನಿಯಮಿತವಾಗಿ ಅನುದಾನ ಬಿಡುಗಡೆಯಾಗುವಂತೆ ಆಸ್ಥೆ ವಹಿಸುವುದು.<br>ರಂಗಸಮಾಜದ ಆರ್ಥಿಕ ಮತ್ತು ಆಡಳಿತಾತ್ಮಕ ವ್ಯವಹಾರವನ್ನು ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದು.<br>ರಂಗಸಮಾಜದ ಹಿತಾಸಕ್ತಿಗಾಗಿ ಅಗತ್ಯ ಬಿದ್ದಾಗೆಲ್ಲಾ ಸರ್ಕಾರಿ ವಲಯದಲ್ಲಿ ತುರ್ತು ಕ್ರಮಗಳನ್ನು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವುದು.<br>ರಂಗಸಮಾಜದ ಎಲ್ಲ ಉದ್ದೇಶಗಳು, ಯೋಜನೆಗಳು ಫಲಪ್ರದವಾಗುವತ್ತ ಕಾಳಜಿ ವಹಿಸುವುದು. | |
| **2) ಸದಸ್ಯ ಕಾರ್ಯದರ್ಶಿಗಳು:**<br>ಇವರು ರಂಗಸಮಾಜದ ಎಲ್ಲ ಕಾರ್ಯಗಳ ನಿರ್ವಹಣೆ ನಿಯಮಿತವಾಗಿ ನಡೆಯುವಂತೆ ನೋಡಿಕೊಂಡು ರಂಗಸಮಾಜದ ಎಲ್ಲ ಆರ್ಥಿಕ ಆಡಳಿತಾತ್ಮಕ ಮತ್ತು ಕಾನೂನು ವ್ಯವಹಾರಗಳಿಗೆ ಯೋಗ್ಯ ಸಲಹೆ, ಸೂಚನೆ ಮತ್ತು ಮಾರ್ಗದರ್ಶನ ನೀಡುವುದು.<br>ಸಾರ್ವತ್ರಿಕ ಮಂಡಳಿ, ನಿರ್ವಾಹಕ ಮಂಡಳಿ, ಮತ್ತಿತರ ಸಮಿತಿ, ಉಪ ಸಮಿತಿಗಳು ನಿರ್ಧರಿಸುವ ನೀತಿನಿಯಮಗಳನ್ನು ಹಾಗೂ ತೀರ್ಮಾನಗಳನ್ನು ಕ್ರಮಬದ್ಧವಾಗಿ ಅನುಷ್ಠಾನಕ್ಕೆ ತರುವುದು.<br>ನಿರ್ವಾಹಕ ಮಂಡಳಿಯ ಅಧ್ಯಕ್ಷರೊಡನೆ ಮತ್ತು ರಂಗಾಯಣದ ನಿರ್ದೇಶಕರೊಡನೆ ಸಮಾಲೋಚಿಸಿ ತುರ್ತು ಕ್ರಮಗಳನ್ನು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವುದು. ಹಾಗೆ ತೆಗೆದುಕೊಂಡ ತೀರ್ಮಾನ ಕ್ರಮಗಳ ಬಗ್ಗೆ ಮುಂದಿನ ಸಾರ್ವತ್ರಿಕ ಮಂಡಳಿಯ ಅನುಮೋದನೆ ಪಡೆಯುವುದು.<br>ಸಾರ್ವತ್ರಿಕ ಮಂಡಳಿ, ನಿರ್ವಾಹಕ ಮಂಡಳಿ, ಮತ್ತಿತರ ಸಮಿತಿ–ಉಪ ಸಮಿತಿಗಳ ಸಭೆ ಕರೆದು ಅವು ಸಮರ್ಪಕವಾಗಿ ನಡೆಯುವಂತೆ ನೋಡಿಕೊಳ್ಳುವುದು. ಮತ್ತು ಎಲ್ಲಾ ಸಭೆಗಳ ಕಾರ್ಯಸೂಚಿ, ತೆಗೆದುಕೊಂಡ ನಿರ್ಣಯಗಳನ್ನು ದಾಖಲೆ ಮಾಡುವುದು.<br>ರಂಗಸಮಾಜದ ವಾರ್ಷಿಕ ವರದಿ, ಲೆಕ್ಕಪತ್ರ ತಪಾಸಣೆ ಮುಂತಾದ ವಿವರಗಳನ್ನು ಕಾಲಕಾಲಕ್ಕೆ ರಾಜ್ಯ ಸರ್ಕಾರಕ್ಕೆ ಸಲ್ಲಿಸುವುದು. | **2) ಉಪಾಧ್ಯಕ್ಷರು :**<br>ಇವರು ರಂಗಸಮಾಜದ ಅಧ್ಯಕ್ಷರು ಹಾಗೂ ಸದಸ್ಯರುಗಳ ನಡುವೆ ಸಂಪರ್ಕ ಸೇತುವೆಯಾಗಿ ಕಾರ್ಯ ನಿರ್ವಹಿಸುವುದು ಮತ್ತು ರಂಗಾಯಣಗಳ ನಿರ್ದೇಶಕರೊಂದಿಗೆ ನಿರಂತರ ಸಂಪರ್ಕದಲ್ಲಿದ್ದುಕೊಂಡು ರಂಗಸಮಾಜದ ಯೋಜನೆಗಳು ಕಾಲ ಕಾಲಕ್ಕೆ ವ್ಯವಸ್ಥಿತವಾಗಿ ಅನುಷ್ಠನಗೊಳ್ಳುತ್ತಿರುವ ಬಗ್ಗೆ ಮೇಲ್ವಿಚಾರಣೆ ನಡೆಸುವುದು. ರಂಗ ಸಮಾಜದ ಅಧ್ಯಕ್ಷರ ಅನುಪಸ್ಥಿತಿಯಲ್ಲಿ , ಅವರ ಅನುಮತಿ ಪಡೆದು ಯಾವುದೇ ಸಭೆಗಳ ಅಧ್ಯಕ್ಷತೆ ವಹಿಸುವುದು.<br><br>**3) ಸದಸ್ಯ ಕಾರ್ಯದರ್ಶಿ –** ಈಗಿರುವಂತೆ | |

<table>
<tr><td></td><td></td><td></td></tr>
<tr><td colspan="3">ಭಾಗ–2</td></tr>
<tr><th>ಪ್ರಸ್ತುತ</th><th>ಪರಿಷ್ಕೃತ</th><th></th></tr>
<tr><td>ನಿರ್ದೇಶಕರು:<br>ಇವರು ರಂಗಸಮಾಜದ ಸಮಸ್ತ ಕಾರ್ಯಗಳ ನಿರ್ವಹಣೆ ಮಾಡುವ ಮುಖ್ಯ ಕಾರ್ಯಾಧಿಕಾರಿಗಳಾಗಿದ್ದು, ರಂಗಸಮಾಜವು ರಾಜ್ಯ ಸರ್ಕಾರದ ಅನುಮೋದನೆ ಪಡೆದು ಇವರನ್ನು ಪೂರ್ಣಾವಧಿಗೆ ನೇಮಕ ಮಾಡುತ್ತದೆ.</td><td rowspan="7">ರಂಗಾಯಣ<br>ಕರ್ನಾಟಕ ಸರ್ಕಾರದಿಂದ ಸ್ಥಾಪಿಸಲ್ಪಟ್ಟು, ರಂಗಸಮಾಜವು ಮುಖ್ಯವಾಗಿ ನಿರ್ವಹಿಸುತ್ತಿರುವ ನಾಟಕ ರೆಪರ್ಟರಿ/ವೃತ್ತಿನಿರತ ಹವ್ಯಾಸಿ ರಂಗಸಂಸ್ಥೆಗಳು ಎಂದು ತಿಳಿಯುವುದು ಹಾಗೂ ಇದು ರಂಗಭೂಮಿಯ ಪ್ರಯೋಗಶಾಲೆಯಂತೆ ಹೊಸ ಸಾಧ್ಯತೆಗಳ ಹುಡುಕಾಟದ ಸುತ್ತ ಕಾರ್ಯ ನಿರ್ವಹಿಸುವುದು.<br><br>ಸ್ವರೂಪ: ಕರ್ನಾಟಕದ ರಂಗಭೂಮಿ ಮತ್ತು ರಂಗಭೂಮಿಗೆ ಪೂರಕವಾದ ಇತರ ಸಾಂಸ್ಕೃತಿಕ ಚಟುವಟಿಕೆಗಳ ಪ್ರಸಾರಕ್ಕೆ ಅನುಕೂಲವಾಗುವ ಯೋಜನೆಗಳನ್ನು ಅನುಷ್ಠಾನಗೊಳಿಸುವುದು.<br><br>ಅ) ರೆಪರ್ಟರಿ: ಅನುಭವಿ ಕಲಾವಿದರ ತಂಡಕ್ಕೆ ರಾಜ್ಯ, ರಾಷ್ಟ್ರ ಹಾಗೂ ಅಂತರಾಷ್ಟ್ರೀಯ ಖ್ಯಾತಿಯ ನಿರ್ದೇಶಕರುಗಳಿಂದ ಪ್ರಯೋಗಶೀಲ, ವಿಭಿನ್ನ ನಾಟಕಗಳ ನಿರ್ದೇಶನ ಮಾಡಿಸಿ, ಹೀಗೆ ಸಿದ್ಧಗೊಂಡ ನಾಟಕವು ಹೊರಜಿಲ್ಲೆ, ಹೊರರಾಜ್ಯ & ಹೊರರಾಷ್ಟ್ರಗಳಲ್ಲಿ ಪ್ರದರ್ಶನಗೊಳ್ಳುವ ಮೂಲಕ ಸಾಂಸ್ಕೃತಿಕ ಕೊಡು–ಕೊಳ್ಳುವಿಕೆಯ ಕೆಲಸದಲ್ಲಿ ತೊಡಗುವುದು. ಹಾಗೆಯೇ ಈ ರೆಪರ್ಟರಿಯ ನಾಟಕಗಳು ಪ್ರತಿ ವಾರ ಪ್ರದರ್ಶನಗೊಳ್ಳುವ ಮೂಲಕ ರಂಗಭೂಮಿಯತ್ತ ಪ್ರೇಕ್ಷಕರನ್ನು ಆಕರ್ಷಿಸುವುದು. ಹಾಗೂ ಈ ತಂಡದ ಸದಸ್ಯರು ತಮ್ಮ ರಂಗಾನುಭವವನ್ನು ಆಯಾ ಸಂದರ್ಭಗಳಲ್ಲಿ</td><td rowspan="7"></td></tr>
<tr><td>ರಾಜ್ಯ ಸರ್ಕಾರದ ವಾರ್ಷಿಕ ಅನುದಾನ, ಕೇಂದ್ರ ಸರ್ಕಾರ ಮತ್ತಿತರ ಸಂಪನ್ಮೂಲಗಳಿಂದ ಬಂದ ಹಣವನ್ನು ಮತ್ತು ರಂಗಸಮಾಜದ ಆದಾಯವನ್ನು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿರಿಸಿ ಸಾರ್ವತ್ರಿಕ ಮಂಡಳಿಯ ಆದೇಶಾನುಸಾರ ವ್ಯಯ ಮಾಡುವುದು, ಠೇವಣಿ ಇಡುವುದು ಇತ್ಯಾದಿ ಬ್ಯಾಂಕ್ ವ್ಯವಹಾರಗಳನ್ನು ನೋಡಿಕೊಳ್ಳುವುದು.</td></tr>
<tr><td>ರಂಗಾಯಣಗಳ ದೈನಂದಿನ ಆಡಳಿತ ಮತ್ತು ಹಣಕಾಸು ವ್ಯವಹಾರಗಳನ್ನು ನಿರ್ವಹಿಸುವುದು ಮತ್ತು ಸಿಬ್ಬಂದಿ ವರ್ಗದ ಕಲಾವಿದ ವರ್ಗದ ದೈನಂದಿನ ಕಾರ್ಯಚಟುವಟಿಕೆಗಳನ್ನು ನಿರ್ಧರಿಸಿ ನಿಯಂತ್ರಿಸುವುದು.</td></tr>
<tr><td>ರಂಗಸಮಾಜದ ಉದ್ದೇಶಗಳಿಗನುಗುಣವಾಗಿ ರಂಗಾಯಣಗಳ ಪ್ರಶಿಕ್ಷಣ ನಾಟಕ ಪ್ರಯೋಗ ಪ್ರದರ್ಶನ ಸಂಚಾರ ಮುಂತಾದ ಕಾರ್ಯಗಳ ರೂಪುರೇಷೆಗಳನ್ನು ತೀರ್ಮಾನಿಸಿ ಅನುಷ್ಠಾನಕ್ಕೆ ತರುವುದು.</td></tr>
<tr><td>ರಂಗಾಯಣ/ಗಳ ಸಮಸ್ತ ಆಸ್ತಿಪಾಸ್ತಿಗಳ ಕ್ರಮಬದ್ಧ ದಾಖಲೆಗಳನ್ನು ಜೋಪಾನವಾಗಿಡುವುದು ಮತ್ತು ಆಸ್ತಿ ಪಾಸ್ತಿಗಳನ್ನು ರಕ್ಷಿಸುವುದು.</td></tr>
<tr><td>ರಂಗಸಮಾಜದ ಹಣವನ್ನು ರಂಗಾಯಣ/ಗಳ ಕಾರ್ಯಗಳಿಗೆ ಸಾರ್ವತ್ರಿಕ ಮಂಡಳಿಯು ನಿರ್ಧರಿಸಿದ ಅಂದಾಜು ವಾರ್ಷಿಕ ಪಟ್ಟಿಯಂತೆ ಬಿಡುಗಡೆ ಮಾಡುವುದು. ಕ್ರಮಬದ್ಧ ಲೆಕ್ಕಪತ್ರಗಳ ದಾಖಲೆಯನ್ನು ಮತ್ತು ಅಧಿಕೃತವಾದ ಲೆಕ್ಕಪತ್ರ ತಪಾಸಣೆಯನ್ನು ಮಾಡಿಸುವುದು.</td></tr>
<tr><td>ಸಿಬ್ಬಂದಿ ವರ್ಗ, ಕಲಾವಿದ ವರ್ಗ, ತಾಂತ್ರಿಕ ವರ್ಗ ಮತ್ತಿತರ</td></tr>
</table>

| | | |
|---|---|---|
| ರಂಗಾಯಣ/ಗಳ ಎಲ್ಲ ಸಿಬ್ಬಂದಿಗಳ ವೇತನ ಮತ್ತಿತರ ಭತ್ಯೆಗಳ ವಿತರಣೆ ಮತ್ತು ನಿಯಮಾನುಸಾರವಾಗಿ ರಜಾ ಸೌಲಭ್ಯ, ವಾರ್ಷಿಕ ರಜೆ, ವೈದ್ಯಕೀಯ ರಜೆ ಮುಂತಾದ ಸಿಬ್ಬಂದಿ ಸೌಲಭ್ಯಗಳನ್ನು ಮಂಜೂರು ಮಾಡುವುದು. | ಅನೇಕ ಉತ್ಸವ ಮತ್ತು ಕಾರ್ಯಕ್ರಮಗಳ ಮೂಲಕ ರಂಗಸಂಶೋಧಕರಿಗೆ, ರಂಗಾಸಕ್ತರಿಗೆ ಯುವಕಲಾವಿದರಿಗೆ, ವಿದ್ಯಾರ್ಥಿಗಳಿಗೆ, ಸಾರ್ವಜನಿಕರಿಗೆ ತಲುಪಿಸುವುದು.<br><br>**ಆ) ಯುವಸಂಚಾರಿ ರಂಗಘಟಕ:** ಆಸಕ್ತ ಯುವ ತಂಡಕ್ಕೆ ವರ್ಷಕ್ಕೆ ಮೂರು ವಿಭಿನ್ನ ಶೈಲಿಯ ಗುಣಮಟ್ಟದ ನಾಟಕಗಳನ್ನು ಕಲಿಸುವ ಮೂಲಕ ಅವರಲ್ಲಿ ರಂಗಭೂಮಿಯ ವೃತ್ತಿಪರ ಕಲಾವಿದರಾಗಿ ಹೊರಹೊಮ್ಮಲು ಅವಶ್ಯಕವಿರುವ ಮೂಲಭೂತ ತರಬೇತಿ ನೀಡುವುದು. ಹೀಗೆ ಸಿದ್ಧಗೊಂಡ ನಾಟಕಗಳನ್ನು ವಿವಿಧ ಸ್ಥಳಗಳಲ್ಲಿ ನಿರಂತರವಾಗಿ ಪ್ರದರ್ಶಿಸುವ ಮೂಲಕ ಆ ಯುವ ಕಲಾವಿದರ ಪ್ರತಿಭಾ ಸಾಮರ್ಥ್ಯ ಹೆಚ್ಚಿಸುವುದರ ಜೊತೆಗೆ, ಅವರಲ್ಲಿ ಸಂಘಟನಾ ಚತುರತೆ ಬೆಳೆಸಿ, ಆ ಮೂಲಕ ರಂಗಭೂಮಿಯನ್ನು ನಿರಂತರವಾಗಿ ಜೀವಂತವಿಡುವ ಪ್ರಯತ್ನ ಮಾಡುವುದು. | |
| ರಂಗಾಯಣಕ್ಕೆ/ಗಳಿಗೆ ಸಂಬಂಧಿಸಿದ ಕಲಾತ್ಮಕ ವಿಷಯಗಳ ಬಗ್ಗೆ ಆರ್ಥಿಕ ಆಡಳಿತಾತ್ಮಕ ವ್ಯವಹಾರಗಳ ಬಗ್ಗೆ ಅಗತ್ಯವಾದ ತುರ್ತು ನಿರ್ಧಾರಗಳನ್ನು ಕ್ರಮಗಳನ್ನು ಕೈಗೊಳ್ಳುವುದು. ಹಾಗೆ ತೆಗೆದುಕೊಂಡ ತೀರ್ಮಾನ, ಕ್ರಮಗಳ ಬಗ್ಗೆ ಮುಂದಿನ ನಿರ್ವಾಹಕ ಮಂಡಳಿಯ ಅನುಮೋದನೆ ಪಡೆಯುವುದು. | | |
| ರಂಗಾಯಣದ/ಗಳ ಪರವಾಗಿ ಸರ್ಕಾರ ಹಾಗೂ ಉಳಿದ ಸಂಸ್ಥೆಗಳ ವ್ಯಕ್ತಿಗಳ ಜೊತೆಗೆ ಪತ್ರ ವ್ಯವಹಾರ ಮಾಡುವುದು. ಸಮಾನ ಉದ್ದೇಶಗಳುಳ್ಳ ಸಂಘ ಸಂಸ್ಥೆಗಳ ವ್ಯಕ್ತಿಗಳ ಜೊತೆಗೆ ಸಾಂಸ್ಕೃತಿಕ ಶೈಕ್ಷಣಿಕ ಸಂಬಂಧಗಳನ್ನು ಬೆಳೆಸುವುದು ಮತ್ತು ವಿನಿಮಯ ಕಾರ್ಯಕ್ರಮಗಳನ್ನು ಏರ್ಪಡಿಸುವುದು. | | |
| ರಂಗಾಯಣದ/ಗಳ ಕಾರ್ಯಗಳಿಗೆ ರಂಗತಜ್ಞರನ್ನು, ನಟ–ನಟಿಯರನ್ನು ನಿರ್ದೇಶಕರನ್ನು, ನಾಟಕಕಾರರನ್ನು, ನಾಟಕ ತಂಡಗಳು ಮತ್ತಿತರ ಅತಿಥಿಗಳನ್ನು ಆಹ್ವಾನಿಸುವುದು. ಅವರಿಗೆ ಸೂಕ್ತ ಸಂಭಾವನೆ, ವಸತಿ, ಪ್ರವಾಸ ವೆಚ್ಚ ನೀಡುವುದು ಮತ್ತು ಸ್ಥಳೀಯ ಆತಿಥ್ಯಗಳನ್ನು ನೋಡಿಕೊಳ್ಳುವುದು. | | ರಂಗವಸ್ತು ಸಂಗ್ರಹಾಲಯವನ್ನು ಕರ್ನಾಟಕ ವಸ್ತು ಸಂಗ್ರಹಾಲಯ ಪ್ರಾಧಿಕಾರದ ಮೂಲಕ ಸ್ಥಾಪಿಸುವುದು. |
| ನಾಟಕ ಪ್ರದರ್ಶನಗಳಿಗೆ ವಿಶೇಷ ಕಾರ್ಯಕ್ರಮಗಳಿಗೆ ಪ್ರವೇಶ ಶುಲ್ಕ ವಿಧಿಸುವ ಮೂಲಕ ಮತ್ತು ನಾಟಕಗಳ ಪರಿಚಯ ಪತ್ರ, ಕರಪತ್ರ ಮುಂತಾದ ಪ್ರಕಟಣೆಗಳನ್ನು ಮಾರಾಟ ಮಾಡಿ ಹಣ ಸಂಗ್ರಹಿಸುವುದು ಮತ್ತು ಅದನ್ನು ರಂಗಾಯಣದ ಕಾರ್ಯಗಳಿಗೆ ವ್ಯಯಮಾಡುವುದು. | | |
| **ಹಣಕಾಸು:** ರಾಜ್ಯ ಮತ್ತು ಕೇಂದ್ರ ಸರಕಾರಗಳಿಂದ ಅನುದಾನದ ರೂಪದಲ್ಲಿಯೂ ಸಾರ್ವಜನಿಕರಿಂದ ಮತ್ತು ಸಂಘ ಸಂಸ್ಥೆಗಳಿಂದ ಧನಸಹಾಯ ದೇಣಿಗೆಯ ರೂಪದಲ್ಲಿಯೂ ಹಣವನ್ನು ಸಂಗ್ರಹಿಸಬೇಕು. | | |
| ಎಲ್ಲ ಸಂಪನ್ಮೂಲಗಳಿಂದ ಸಂಗ್ರಹವಾದ ಹಣವನ್ನು ಮತ್ತು ವಿವಿಧ ಮೂಲಗಳಿಂದ ಬರುವ ಆದಾಯವನ್ನು ರಂಗಸಮಾಜದ ಹೆಸರಿನಲ್ಲಿ ಸಾರ್ವತ್ರಿಕ ಮಂಡಳಿಯು ಸೂಚಿಸುವ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿಟ್ಟು ವ್ಯವಹರಿಸಬೇಕು. | | |
| ಸಾರ್ವತ್ರಿಕ ಮಂಡಳಿಯು ನಿರ್ಧರಿಸುವ ವಾರ್ಷಿಕ ವೆಚ್ಚವನ್ನು ಪ್ರತಿವರ್ಷ ರಂಗಾಯಣಕ್ಕೆ/ಗಳಿಗೆ ಬಿಡುಗಡೆ ಮಾಡಬೇಕು. ಹೀಗೆ ಬಿಡುಗಡೆ ಮಾಡಿದ ಹಣವನ್ನು ನಿರ್ವಾಹಕ ಮಂಡಳಿಯು ಸೂಚಿಸುವ ಸ್ಥಳೀಯ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ನಾಟಕ ಕರ್ನಾಟಕ | | |

| | | |
|---|---|---|
| ರಂಗಾಯಣದ/ಗಳ ಹೆಸರಿನಲ್ಲಿಟ್ಟು ವ್ಯವಹರಿಸಬೇಕು. | | |
| ರಂಗಸಮಾಜದ ಮತ್ತು ರಂಗಾಯಣದ/ಗಳ ಬ್ಯಾಂಕಿನ ಖಾತೆಗಳ ಎಲ್ಲ ಹಣಕಾಸು ವ್ಯವಹಾರವನ್ನು ಸಾರ್ವತ್ರಿಕ ಮಂಡಳಿಯು ನಿರ್ಧರಿಸುವ ಅಂಗೀಕೃತ ಮಾರ್ಗದಲ್ಲಿಯೇ ನಡೆಸತಕ್ಕದ್ದು. | | |
| ರಂಗಸಮಾಜದ ಎಲ್ಲ ಲೆಕ್ಕಪತ್ರಗಳ ತಪಾಸಣೆಯನ್ನು ಪ್ರತಿವರ್ಷ ಸಾರ್ವತ್ರಿಕ ಮಂಡಳಿಯು ನಿಯಮಿಸುವ ಸನ್ನದು ಲೆಕ್ಕಿಗರಿಗೆ (ಚಾರ್ಟರ್ಡ್ ಅಕೌಂಟೆಂಟ್) ಅಧಿಕೃತ ಪರಿಶೋಧನೆಗೆ ಒಪ್ಪಿಸಬೇಕು. | | |
| ವಾರ್ಷಿಕ ಲೆಕ್ಕಪತ್ರಗಳ ವಿವರ ಪತ್ರವನ್ನು ಸನ್ನದು-ಲೆಕ್ಕಿಗರ ಟಿಪ್ಪಣಿ ವಿಮರ್ಶೆ ಮತ್ತು ಹೇಳಿಕೆಗಳ ಸಮೇತ ತನ್ನ ಸ್ವಂತ ಸ್ಪಷ್ಟೀಕರಣಗಳೊಡನೆ ನಿರ್ವಾಹಕ ಮಂಡಳಿಯು ಪ್ರತಿವರ್ಷ ಸಾರ್ವತ್ರಿಕ ಮಂಡಳಿಯ ವಾರ್ಷಿಕ ಸಭೆಯಲ್ಲಿ ಮಂಡಿಸಬೇಕು. ನಂತರ ಕರ್ನಾಟಕ ರಾಜ್ಯದ ಸೊಸೈಟಿಯ ನೋಂದಣಿಯ ರಿಜಿಸ್ಟ್ರಾರ್ ರವರಿಗೆ ಮತ್ತು ಕರ್ನಾಟಕ ಸರ್ಕಾರಕ್ಕೆ ಅವಗಾಹನೆಗೆ ಸಲ್ಲಿಸಬೇಕು. | | |
| 1961ರ ಕರ್ನಾಟಕ ಆದಾಯ ತೆರಿಗೆ ಕಾಯಿದೆಯ ಎಸ್.ಬಿ(1) ಲ ಮತ್ತು ಎಸ್.ಬಿ(5)ನಿಯಮಗಳ ರೀತ್ಯ ಮಾತ್ರ ರಂಗಸಮಾಜದ ಬಂಡವಾಳವನ್ನು ತೊಡಗಿಸಬೇಕು. | ರಂಗಾಯಣವು 2011ರಿಂದ ರಂಗಶಾಲೆಯನ್ನು ನಡೆಸುತ್ತಿದ್ದು, ಮುಂದಿನ ದಿನಗಳಲ್ಲಿ ಉತ್ತರ ಕಾರ್ನಟಕದ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಅಗತ್ಯವೆನಿಸಿದಲ್ಲಿ ಉತ್ತರ ಕರ್ನಾಟಕ / ಹೈದರಾಬಾದ್ ಕರ್ನಾಟಕದ ಯಾವುದಾದರೂ ಒಂದು ರಂಗಾಯಣದಲ್ಲಿ ಮಾತ್ರ ಇನ್ನೊಂದು ರಂಗಶಾಲೆಯನ್ನು ತೆರೆಯಬಹುದಾಗಿದೆ. ಹೀಗೆ ಭಾರತೀಯ ರಂಗಶಿಕ್ಷಣ ಕೇಂದ್ರಗಳಿಂದ ಹೊರ ಬರುವ ಯುವ ಕಲಾವಿದರಿಗೆ ಎಲ್ಲ ರಂಗಾಯಣಗಳು ರೆಪರ್ಟರಿಗೆ ಕಲಾವಿದರನ್ನು ಆಯ್ಕೆ ಮಾಡುವಾಗ ಆದ್ಯತೆ ನೀಡಬೇಕು.<br><br>**ಈ)ರಂಗವಸ್ತು ಸಂಗ್ರಹಾಲಯ:** ಕರ್ನಾಟಕದ ಐತಿಹಾಸಿಕ ಮತ್ತು ಸಮಕಾಲೀನ ರಂಗಭೂಮಿಯ ಮಹತ್ವ ಪ್ರತಿಬಿಂಬಿಸುವ ನಿಟ್ಟಿನಲ್ಲಿ ರಂಗವಸ್ತು ಸಂಗ್ರಹಾಲಯ ಸ್ಥಾಪಿಸುವುದು.<br><br>**ಉ) ಗ್ರಂಥಾಲಯ:** ರಂಗಭೂಮಿ ಮತ್ತು ಅದಕ್ಕೆ ಸಂಬಂಧಿಸಿದ ಕಲೆಗಳ | 8. ಯಾವುದೇ ಸರ್ಕಾರಿ/ಅರೆಸರ್ಕಾರಿ ಸೇವೆಯಲ್ಲಿದ್ದವರು ನೇಮಕವಾದರೆ, ಅವರ ಪೂರ್ಣವೇತನವನ್ನು |

| | | |
|---|---|---|
| | **ಅ) i) ನಿರ್ದೇಶಕರು:–**<br>ರಂಗಭೂಮಿ, ಸಾಹಿತ್ಯ, ಸಂಸ್ಕೃತಿ ಕಲೆಗಳಲ್ಲಿ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ಸಾಧನೆ ಮಾಡಿದ ರಾಜ್ಯದ ಅಥವಾ ಹೊರರಾಜ್ಯದ ಕನ್ನಡಿಗರೊಬ್ಬರನ್ನು ರಂಗಸಮಾಜದ ಶಿಫಾರಸ್ಸಿನ ಮೇರೆಗೆ ಕರ್ನಾಟಕ ಸರ್ಕಾರದಿಂದ ಆಯ್ಕೆಯಾದ ತಜ್ಞರೊಬ್ಬರು ರಂಗಾಯಣ ಮುಖ್ಯಸ್ಥರಾಗಿ ಕಾರ್ಯ ನಿರ್ವಹಿಸುತ್ತಾರೆ.<br><br>**ii) ನಿರ್ದೇಶಕರ ಆಯ್ಕೆ ಪ್ರಕ್ರಿಯೆ:–**<br>ರಂಗಾಯಣದ ಖ್ಯಾತಿಯನ್ನು ಅಂತರಾಷ್ಟ್ರೀಯ ಮಟ್ಟಕ್ಕೆ ಕೊಂಡೊಯ್ಯುವ ಮೂಲಕ ಕರ್ನಾಟಕದ ರಂಗಭೂಮಿಯನ್ನು ಬಲಪಡಿಸುವ ನಿಟ್ಟಿನಲ್ಲಿ ರಂಗಾಯಣವನ್ನು ಹೇಗೆ ಬೆಳೆಸಬೇಕೆಂಬ ಸ್ಪಷ್ಟ ಕಲ್ಪನೆ ನಿರ್ದೇಶಕರಾಗಿ ಬರುವವರಿಗೆ ಇರಬೇಕಾಗಿರುವುದು ಅವಶ್ಯಕ. ಆದ್ದರಿಂದ ರಂಗಸಮಾಜವು ನಿರ್ದೇಶಕರ ಆಯ್ಕೆ ಪೂರ್ವದಲ್ಲಿ, ರಂಗಾಯಣದ ಸಮಗ್ರ ಅಭಿವೃದ್ಧಿಗೆ ಸಂಬಂಧಿಸಿದಂತೆ ಯೋಜನೆಗಳನ್ನು ರೂಪಿಸಿ ರಂಗಸಮಾಜಕ್ಕೆ ಸಲ್ಲಿಸುವಂತೆ ತಜ್ಞರಿಂದ ಅರ್ಜಿ ಆಹ್ವಾನಿಸುತ್ತದೆ. ಹೀಗೆ ಬಂದ ವರದಿಗಳನ್ನು ರಂಗಸಮಾಜವು ಕೂಲಕುಂಷವಾಗಿ ಅಧ್ಯಯನ ಮಾಡಿ ಅತ್ಯುತ್ತಮ ಯೋಜನೆ ಸಿದ್ಧಪಡಿಸಿದ ಮೂರು ಜನರ ಹೆಸರನ್ನು ಸರ್ಕಾರಕ್ಕೆ ಶಿಫಾರಸ್ಸು ಮಾಡುತ್ತದೆ. ಮತ್ತು ಹೀಗೆ ಆಧ್ಯತಾ ಪಟ್ಟಿಯನ್ನು ಸಿದ್ಧಗೊಳಿಸುವಾಗ ಸದರಿ ಪರಿಣಿತರ ರಂಗಾನುಭವ ಶೈಕ್ಷಣಿಕ ಅರ್ಹತೆ ನಾಯಕತ್ವದ ಅನುಭವ ಮತ್ತು ಬದ್ಧತೆಗಳನ್ನು ಪರಿಗಣಿಸಬೇಕು.<br>ಶಿಫಾರಸ್ಸಿನ ಆದ್ಯತೆಯನ್ನು ಆಧರಿಸಿ ಒಬ್ಬರನ್ನು ನಿರ್ದೇಶಕರನ್ನಾಗಿ ಸರ್ಕಾರ ನೇಮಕ ಮಾಡುವುದು.<br>**iii) ರಂಗಾಯಣ ನಿರ್ದೇಶಕರ ಜವಾಬ್ದಾರಿಗಳು:** | ರಂಗಾಯಣದಿಂದ ಭರಿಸುವಾಗ ದೂರವಾಣಿ ವೆಚ್ಚ ಮಾತ್ರ ಪಾವತಿಸುವುದು. |

| | | |
|---|---|---|
| | 1. ನಾಟಕ ಕರ್ನಾಟಕ ರಂಗಾಯಣ ಸಂಸ್ಥೆಯ ನಿರ್ದೇಶಕರು ಮುಖ್ಯಸ್ಥರಾಗಿರುತ್ತಾರೆ..<br>2. ರಂಗಾಯಣದ ನಿರ್ದೇಶಕರು ಸಾರ್ವತ್ರಿಕ ಮಂಡಳಿ, ನಿರ್ವಾಹಕ ಮಂಡಳಿಯು ತೀರ್ಮಾನಿಸಿದಂತಹ ರೆಪರ್ಟರಿಯ ಒಳಗೊಳ್ಳುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಪೂರ್ಣ ಜವಾಬ್ದಾರಿ ಹೊಂದಿರುತ್ತಾರೆ.<br>3. ರಂಗಾಯಣದ ರಂಗಚಟುವಟಿಕೆಗಳಿಗೆ ಸಂಬಂಧಿಸಿದಂತೆ ಅಂದರೆ ನಾಟಕ ತಯಾರಿಕೆ, ನಾಟಕ ತರಬೇತಿ, ಪ್ರದರ್ಶನ ಮತ್ತು ಪ್ರಯೋಗ ಹಾಗೂ ಈ ಬಾಬ್ತುಗಳಿಗೆ ಸಂಬಂಧಿಸಿದಂತೆ ತಾಂತ್ರಿಕ ಅನುಕೂಲತೆಗಳನ್ನು ನಿರ್ಧರಿಸುವ ಮತ್ತು ಅನುಷ್ಠಾನಗೊಳಿಸುವ ಅಧಿಕಾರ ಹೊಂದಿರುತ್ತಾರೆ. | |

4. ರಂಗಾಯಣದ ಕಾರ್ಯಗಳಿಗೆ ರಂಗತಜ್ಞರನ್ನು ನಟ–ನಟಿಯರನ್ನು

| | | |
|---|---|---|
| **ಬದಲಾವಣೆ ಮತ್ತು ತಿದ್ದುಪಡಿ:**<br>ಇಲ್ಲಿ ದಾಖಲಿಸಲಾದ ರಂಗಸಮಾಜದ ವಿವರಣ ಪತ್ರವನ್ನು ಮತ್ತು ನಿಬಂಧನೆಗಳನ್ನು ಬದಲಿಸಬೇಕಾದಲ್ಲಿ, ತಿದ್ದಬೇಕಾದಲ್ಲಿ ಅಥವಾ ಉಪನಿಬಂಧನೆಗಳನ್ನು, ನಿಯಮಗಳನ್ನು ಸೇರಿಸಬೇಕಾದಲ್ಲಿ ಕರ್ನಾಟಕ ರಾಜ್ಯದ ಸೊಸೈಟಿ ನೋಂದಾವಣೆ ಕಾಯಿದೆ (ಕರ್ನಾಟಕ ಸೊಸೈಟೀಸ್ ರಿಜಿಸ್ಟ್ರೇಷನ್ ಆಕ್ಟ್ 1960) ಮತ್ತು ಅದರ ಉಪ ನಿಯಮಗಳಿಗೆ ಅನುಗುಣವಾಗಿ ನಡೆಯಬೇಕು. | ಈಗಿರುವಂತೆ | |
| ಇಂತಹ ಬದಲಾವಣೆ ಮತ್ತು ತಿದ್ದುಪಡಿಗಳನ್ನು ಈ ಉದ್ದೇಶಕ್ಕಾಗಿಯೇ ಕರೆಯಲಾಗುವ ಸಾರ್ವತ್ರಿಕ ಮಂಡಳಿಯ ವಿಶೇಷ ಸಭೆಯಲ್ಲಿ ಮಂಡಿಸಿ ಒಪ್ಪಿಗೆ ಪಡೆಯಬೇಕು. ಮತ್ತು ಅವುಗಳನ್ನು ಜಾರಿಗೆ ತರಲು ಕರ್ನಾಟಕ ರಾಜ್ಯದ ಸೊಸೈಟಿ ನೋಂದಣಿ ರಿಜಿಸ್ಟ್ರಾರ್ ಮತ್ತು ಕರ್ನಾಟಕ ಸರ್ಕಾರದ ಅನುಮೋದನೆ ಪಡೆಯಬೇಕು. | ಈಗಿರುವಂತೆ | |
| **ಲಾಭ ನಿರಾಪೇಕ್ಷ ರಂಗಸಮಾಜ: (ಸೊಸೈಟಿ):** ಲಿಂಗ ಜಾತಿ ಮತ ಧರ್ಮಗಳ ಬೇಧವಿಲ್ಲದ ಎಲ್ಲರಿಗೂ ಸಮಾನ ಅವಕಾಶವಿರುವ ಸಾರ್ವಜನಿಕ ಸಂಸ್ಥೆಯಾಗಿದೆ. | ಈಗಿರುವಂತೆ | |
| **ಸಂಗ್ರಹಿತವಾಗುವ ನಿಧಿ ಮತ್ತು ಆದಾಯದ ಉಪಯೋಗವು** ರಂಗಸಮಾಜದ ಉದ್ದೇಶ ಸಾಧನೆಗೆ ಮಾತ್ರ ಮೀಸಲಾಗಿರುತ್ತದೆ. ಅದರ ಯಾವುದೇ ಭಾಗವನ್ನು ಸದಸ್ಯರಿಗೆ ಲಾಭ, ಬಡ್ಡಿ, ಡಿವಿಡೆಂಟ್, ಸಾಲ ಮುಂತಾದ ಯಾವುದೇ ರೂಪದಲ್ಲಿ ಸಂದಾಯ ಮಾಡಲು ಬರುವುದಿಲ್ಲ. | ಈಗಿರುವಂತೆ | |
| ರಂಗಸಮಾಜವು ಸಂಪೂರ್ಣವಾಗಿ ಕರ್ನಾಟಕ ರಾಜ್ಯದ ಸೊಸೈಟಿ ನೋಂದಾವಣೆಯ ಕಾಯಿದೆ ಮತ್ತು ಅದರ ಉಪ ನಿಯಮಗಳಿಗೆ ಬದ್ಧವಾಗಿರುತ್ತದೆ. | ಈಗಿರುವಂತೆ | |
| **ವಿಸರ್ಜನೆ:**<br>ಒಂದು ವೇಳೆ ಸಾರ್ವತ್ರಿಕ ಮಂಡಳಿಯು ರಂಗಸಮಾಜವನ್ನು ವಿಸರ್ಜಿಸಬೇಕೆಂದು ತೀರ್ಮಾನಿಸಿದಲ್ಲಿ ವಿಸರ್ಜನಾ ದಿನಾಂಕದಂದು ರಂಗಸಮಾಜದ ಹೆಸರಿನಲ್ಲಿರುವ ಆಸ್ತಿ ಪಾಸ್ತಿಗಳನ್ನು ಯಾವುದೇ ಕಾರಣಕ್ಕಾಗಿ ರಂಗಸಮಾಜದ ಸದಸ್ಯರಲ್ಲಿ ಹಂಚಲು ಬರುವುದಿಲ್ಲ. ಆ ಆಸ್ತಿ ಪಾಸ್ತಿಗಳನ್ನು ಸದರಿ ರಂಗಸಮಾಜದ ಧ್ಯೇಯೋದ್ದೇಶಗಳಿಗೆ ಸಮಾನವಾದ ಧ್ಯೇಯೋದ್ದೇಶಗಳನ್ನೇ ಹೊಂದಿರುವ, ಅಧಿಕೃತವಾದ ರಾಜ್ಯ ಸರ್ಕಾರದ ಮನ್ನಣೆ ಪಡೆದ ಮತ್ತೊಂದು ಲಾಭ ನಿರಪೇಕ್ಷ, ಧರ್ಮದತ್ತಿ ಸಮಾಜ, ಪ್ರತಿಷ್ಠಾನ, ಸಂಘ ಅಥವಾ ಸಂಸ್ಥೆಗೆ | ಈಗಿರುವಂತೆ | |

| | | |
|---|---|---|
| ವರ್ಗಾಯಿಸತಕ್ಕದ್ದು. ರಂಗಸಮಾಜದ ವಿಸರ್ಜನೆ ಮತ್ತು ಆಸ್ತಿ ಪಾಸ್ತಿಗಳ ವರ್ಗಾವಣೆಯನ್ನು ಸರ್ಕಾರದ ಪೂರ್ವಾನುಮತಿ ಪಡೆದು ಕರ್ನಾಟಕ ರಾಜ್ಯದ ಸೊಸೈಟಿ ನೋಂದಣಿಯ ಕಾಯಿದೆಯನ್ವಯ ಮಾಡತಕ್ಕದ್ದು. | | |